**Scholarly Research Journal for Interdisciplinary Studies**
Online ISSN 2278-8808, SJIF 2025 = 8.486
Peer Reviewed & Refereed Journal, AUG-SEPT 2025, Vol- 13/86

# HISTORICAL STUDY OF CULTURAL HERITAGE CENTRES OF TUMKUR DISTRICT

**Prasannakumar K. N**
*Associate Professor, Government First Grade College, Badavanahalli, Madhugiri, Tumkur District*

**Paper Received On**: 20 AUGUST 2025
**Peer Reviewed On:** 24 SEPTEMBER 2025
**Published On:** 01 OCTOBER 2025

***Abstract***

*Tumkur district of Karnataka has a rich cultural heritage with several historical and religious sites. The cultural heritage of Tumkur district focuses on the history, architecture and cultural influences of various dynasties. The heritage of the district is preserved through ancient forts, temples, and religious centres, which reflect its evolution under rulers like the Gangas, Hoysalas, Vijayanagara king,s and later Nayaks and the Mysore Odes.*

# ತುಮಕೂರು ಜಿಲ್ಲೆಯ ಸಾಂಸ್ಕೃತಿಕ ಪರಂಪರೆ ಕೇಂದ್ರಗಳ ಚಾರಿತ್ರಿಕ ಅಧ್ಯಯನ

**ಪ್ರಸನ್ನಕುಮಾರ್ ಕೆ.ಎನ್**
ಸಹ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಬಡವನಹಳ್ಳಿ, ಮಧುಗಿರಿ, ತುಮಕೂರು ಜಿಲ್ಲೆ

**ಪ್ರಸ್ತಾವನೆ**

ಕರ್ನಾಟಕದ ತುಮಕೂರು ಜಿಲ್ಲೆಯು ಹಲವಾರು ಐತಿಹಾಸಿಕ ಮತ್ತು ಧಾರ್ಮಿಕ ತಾಣಗಳೊಂದಿಗೆ ಶ್ರೀಮಂತ ಸಾಂಸ್ಕೃತಿಕ ಪರಂಪರೆಯನ್ನು ಹೊಂದಿದೆ. ತುಮಕೂರು ಜಿಲ್ಲೆಯ ಸಾಂಸ್ಕೃತಿಕ ಪರಂಪರೆಯು ವಿವಿಧ ರಾಜವಂಶಗಳ ಕಾಲದ ಇತಿಹಾಸ, ವಾಸ್ತುಶಿಲ್ಪ ಮತ್ತು ಸಾಂಸ್ಕೃತಿಕ ಪ್ರಭಾವಗಳ ಮೇಲೆ ಕೇಂದ್ರೀಕರಿಸಿದೆ. ಜಿಲ್ಲೆಯ ಪರಂಪರೆಯನ್ನು ಪ್ರಾಚೀನ ಕೋಟೆಗಳು, ದೇವಾಲಯಗಳು ಮತ್ತು ಧಾರ್ಮಿಕ ಕೇಂದ್ರಗಳ ಮೂಲಕ ಸಂರಕ್ಷಿಸಲಾಗಿದೆ, ಇದು ಗಂಗರು,

*Copyright © 2025, Scholarly Research Journal for Interdisciplinary Studies*

ಹೊಯ್ಸಳರು, ವಿಜಯನಗರ ಅರಸರು ಮತ್ತು ನಂತರದ ನಾಯಕರು ಹಾಗೂ ಮೈಸೂರು ಒಡೆಯರಂತಹ ಆಡಳಿತಗಾರರ ಅಡಿಯಲ್ಲಿ ಅದರ ವಿಕಸನ ಪ್ರತಿಬಿಂಬಿತವಾಗಿದೆ.

**ಪೀಠಿಕೆ**

ಭಾರತದ ಇತಿಹಾಸದಲ್ಲಿ ಅದರಲ್ಲೂ ಕರ್ನಾಟಕ ರಾಜ್ಯದಲ್ಲಿರುವ ತುಮಕೂರು ಜಿಲ್ಲೆಯ ಸಾಂಸ್ಕೃತಿಕ ಪರಂಪರೆ ಕೇಂದ್ರಗಳ ಚಾರಿತ್ರಿಕ ಅಧ್ಯಯನವನ್ನು ನಡೆಸಲಾಗಿರುತ್ತದೆ. ತುಮಕೂರು ಜಿಲ್ಲೆಯು ತನ್ನದೇ ಆದ ಚಾರಿತ್ರಿಕ ಹಿನ್ನೆಲೆಯನ್ನು ಹೊಂದಿರುವ ಜಿಲ್ಲೆಯಾಗಿದೆ.

ತುಮಕೂರಿನಲ್ಲಿರುವ ಪ್ರಾಗೈತಿಹಾಸಿಕ ನೆಲೆಗಳು, ಬೆಟ್ಟಗುಡ್ಡಗಳು, ಗಡಿಗಳು, ಪ್ರಾಚೀನ ಕಾಲದ ಸಮಾಧಿಗಳು, ಶಿಲಾಯುಗದ ನೆಲೆಗಳು, ಜಾನಪದ ಆಚರಣೆಯ ನೆಲೆಗಳು, ಮಠಮಾನ್ಯಗಳು, ನೆಲ, ಜಲ, ಸಂಸ್ಕöÈತಿಗೆ ಪೂರಕವಾದ ನೆಲೆಗಳು ಮತ್ತು ಈ ಭಾಗದ ದೇವಾಲಯಗಳನ್ನು ಹಲವಾರು ದೃಷ್ಟಿಕೋನಗಳಿಂದ ಗಮನಿಸಬಹುದಾಗಿದೆ. ತುಮಕೂರು ಜಿಲ್ಲೆಯಲ್ಲಿ ಸುಮಾರು ೧೫ ಸಾವಿರ ವರ್ಷಗಳ ಮಾನವ ಜೀವನದ ಚಹರೆಗಳನ್ನು ಪುರಾತತ್ವ ವಿದ್ವಾಂಸರು ಗುರುತಿಸಿದ್ದಾರೆ. ಅಂದಿನಿAದ ಇಂದಿನವರೆಗೂ ತುಮಕೂರು ಜಿಲ್ಲೆಯ ವಿಕಾಸ ಏಳುಬೀಳುಗಳನ್ನು ವಿದ್ವಾಂಸರು ಗಮನಿಸಿದ್ದಾರೆ. ಪ್ರಾಚೀನ ಶಿಲ್ಪಕಲೆ, ವೀರಭದ್ರನ ವಿಶಿಷ್ಠ ಮುಡಿಗಳು ಹಾಗೂ ಹಬ್ಬದಾಚರಣೆಗಳು, ವೀರಗಲ್ಲುಗಳು, ಶಿವಾಚಾರ್ಯ ಹಾಗೂ ಶಿವಶರಣರ ಶಿಲ್ಪಗಳು, ಕದಂಬ ನಾಗರ ಶೈಲಿಯ ದೇವಾಲಯಗಳು, ಗೋಪುರಗಳು, ಹೊಯ್ಸಳ ಶೈಲಿಯ ವಿಗ್ರಹಗಳು, ಶಿಲ್ಪಗಳು ವೈವಿಧ್ಯಮಯವಾಗಿ ಇಲ್ಲಿ ಆಕರ್ಷಕವಾದ ನೆಲೆಗಳು ತುಮಕೂರು ಜಿಲ್ಲೆಯಲ್ಲಿವೆ.

**ಸಂಶೋಧನಾ ವಿಧಾನ**

"ತುಮಕೂರು ಜಿಲ್ಲೆಯ ಸಾಂಸ್ಕೃತಿಕ ಪಾರಂಪರಿಕ ತಾಣಗಳ ಚಾರಿತ್ರಿಕ ಅಧ್ಯಯನ" ಎಂಬ ವಿಷಯಕ್ಕೆ ಸಂಬAಧಿಸಿದAತೆ ಅಧ್ಯಯನವನ್ನು ನಡೆಸಲಾಗಿರುತ್ತದೆ. ಇದಕ್ಕೆ ಪೂರಕವಾಗಿ ಸಂಶೋಧನಾ ಲೇಖನವನ್ನು ರಚಿಸಲು ಈ ಕೆಳಕಂಡ ವಿಧಾನಗಳನ್ನು ಅನುಸರಿಸಲಾಗಿದೆ.

೧. ಕ್ಷೇತ್ರಕಾರ್ಯ- ಸಂಶೋಧನಾ ಅವಧಿಯಲ್ಲಿ ತುಮಕೂರು ಜಿಲ್ಲೆಯ ಪ್ರವಾಸಿ ತಾಣಗಳಿಗೆ ಭೇಟಿ ನೀಡಿ ಲೇಖನಕ್ಕೆ ಬೇಕಾಗಿರುವ ಆಕರಗಳನ್ನು ಸಂಗ್ರಹಿಸಿದ್ದೇನೆ.

೧.೧ ಸAದರ್ಶನಗಳು- ಸಂಶೋಧನಾ ಕಾರ್ಯದಲ್ಲಿ ತೋಡಗಿದಾಗ ಹಲವಾರು ತಜ್ಞರು ಮತ್ತು ಸ್ಥಳಿಯರನ್ನು ಸಂದರ್ಶಿಸಿ ಈ ಲೇಖನಕ್ಕೆ ಉಪಯುಕ್ತವಾಗುವಂತಹ ಅಂಶಗಳು ಹಾಗೂ ಮಾಹಿತಿಯನ್ನು ಪಡೆದಿರುತ್ತೇನೆ.

೧.೨ ಛಾಯಾಚಿತ್ರಗಳು- ಪಾರಂಪರಿಕ ತಾಣಗಳಿಗೆ ಭೇಟಿ ನೀಡಿ ಸಂಗ್ರಹಿಸಿರುವ ದಾಖಲೆಗಳು ಮತ್ತು ಛಾಯಾಚಿತ್ರಗಳ ಆಧಾರದ ಮೇಲೆ ಈ ಲೇಖನವನ್ನು ರಚಿಸಿದ್ದೇನೆ.

೨. ಗ್ರಂಥಾಲಯಗಳಿಗೆ ಭೇಟಿ: ಸಂಶೋಧನಾ ಅವಧಿಯಲ್ಲಿ ಈ ಲೇಖನಕ್ಕೆ ಬೇಕಾಗಿರುವ ಪ್ರಾಥಮಿಕ, ಮಾದ್ಯಮಿಕ ಮತ್ತು ಅನುಸಂಗಿಕ ಆಕರಗಳನ್ನು ಗ್ರಂಥಾಲಯಗಳಿಗೆ ಭೇಟಿ ನೀಡುವುದರ ಮುಖಾಂತರ ಮಾಹಿತಿಯನ್ನು ಪಡೆದುಕೊಂಡಿರುತ್ತೇನೆ.

Copyright © 2025, Scholarly Research Journal for Interdisciplinary Studies

ಈ ರೀತಿ ವಿವಿಧ ಸಂಶೋಧನಾ ವಿಧಾನಗಳನ್ನು ಅಳವಡಿಸಿಕೊಂಡು ಸಂಗ್ರಹಿಸಿದ ಮಾಹಿತಿಯನ್ನು ಪರಿಷ್ಕರಿಸಿ, ಕ್ರೂಢಿಕರಿಸಿ, ವಿಶ್ಲೇಷಣೆ ಮಾಡಿ ಲೇಖನವನ್ನು ಸಿದ್ಧಪಡಿಸಿರುತ್ತೇನೆ.

**ತುಮಕೂರು ಜಿಲ್ಲೆಯ ಇತಿಹಾಸ**

ಭಾರತದ ಇತಿಹಾಸದಲ್ಲಿ ಅದರಲ್ಲೂ ಕರ್ನಾಟಕದ ರಾಜ್ಯದಲ್ಲಿರುವ ತುಮಕೂರು ಜಿಲ್ಲೆಯಲ್ಲಿ ಸಾಂಸ್ಕೃತಿಕ ಪಾರಂಪರಿಕ ತಾಣಗಳ ಚಾರಿತ್ರಿಕ ಅಧ್ಯಯನವನ್ನು ನಡೆಸಲಾಗಿರುತ್ತದೆ. ತುಮಕೂರು ಜಿಲ್ಲೆಯು ತನ್ನದೇ ಆದ ಇತಿಹಾಸವನ್ನು, ಚಾರಿತ್ರಿಕ ಹಿನ್ನೆಲೆಯನ್ನು ಹೊಂದಿರುವ ಜಿಲ್ಲೆಯಾಗಿದ್ದು, ಸುಮಾರು ೧೫ ಸಾವಿರ ವರ್ಷಗಳ ಮಾನವ ಜೀವನದ ಚಹರೆಗಳನ್ನು ಪುರಾತತ್ವ ವಿದ್ವಾಂಸರು ಗುರುತಿಸಿದ್ದಾರೆ. ಅಂದಿನಿAದ ಇಂದಿನವರೆಗೂ ತುಮಕೂರು ಜಿಲ್ಲೆಯ ವಿಕಾಸ ಏಳುಬೀಳುಗಳನ್ನು ವಿದ್ವಾಂಸರು ಗಮನಿಸಿದ್ದಾರೆ.

ತುಮಕೂರು ಜಿಲ್ಲೆಯು ಪ್ರಧಾನ ಪಟ್ಟಣವಾಗಿದ್ದು ಕರ್ನಾಟಕದ ರಾಜಧಾನಿ ಬೆಂಗಳೂರಿನಿAದ ೭೦ ಕಿಲೋಮೀಟರ್ ದೂರದಲ್ಲಿದೆ. ಜಿಲ್ಲೆಯ ಹೆಸರಿನ ಮೂಲವನ್ನು ಅದೇ ಹೆಸರಿನಿಂದ ಕರೆಯಲಾಗುತ್ತದೆ. ಜನಪ್ರಿಯ ಸಂಪ್ರದಾಯದ ಪ್ರಕಾರ ತುಮಕೂರು ಒಂದು ಕಾಲದಲ್ಲಿ ಒಂದು ಪ್ರದೇಶದ ಭಾಗವಾಗಿತ್ತು. ಅದರ ರಾಜಧಾನಿ ಕ್ರೀಡಾಪುರ, ಈಗ ತುಮಕೂರಿನ ದಕ್ಷಿಣಕ್ಕೆ ಮೂರು ಮೈಲಿ ದೂರದಲ್ಲಿರುವ ಕೈದಾಳ ಎಂದು ಕರೆಯಲ್ಪಡುವ ಒಂದು ಸಣ್ಣ ಗ್ರಾಮ ಮತ್ತು ಅದನ್ನು ಅದರ ಆಡಳಿತಗಾರರೊಬ್ಬರು ಹೆರಾಲ್ಡ್ ಅಥವಾ ಟಾಮ್‌ಗೆ ಪ್ರಸ್ತುತಪಡಿಸಿದರು. ಟಾಮ್ ಬೀಟರ್, ತುಮುಕೆ ಎಂಬುದು ಚಿಕ್ಕ ಡ್ರಮ್ ಅಥವಾ ಟ್ಯಾಬ್ರೆಟ್ ಆಗಿದೆ, ಇದನ್ನು ಟಾಮ್‌ಗೆ ಪ್ರಸ್ತುತಪಡಿಸಿದರು. ಟಾಮ್-ಟಿಮಿಂಗ್‌ಗೆ ಬಳಸಲಾಗುತ್ತದೆ ಮತ್ತು ಇದು ತುಮುಕೆ ಹೊಡೆಯುವವರಿಗೆ ಸೇರಿದೆ ಎಂದು ಸೂಚಿಸಲು ಈ ಪಟ್ಟಣವನ್ನು ತುಮುಕೆ-ಊರು ಎಂದು ಕರೆಯಬಹುದು. ಆದರೆ ಹತ್ತನೇ ಶತಮಾನದ ಕೆಲವು ಶಾಸನಗಳ ಪ್ರಕಾರ, ಈ ಸ್ಥಳದ ಮೂಲ ಹೆಸರು ತುಮ್ಮೆಗೂರು, ಅಂದರೆ ತುಮ್ಮೆ ಅಥವಾ ತುಂಬೆ ಹೂವಿನ ಸ್ಥಳ, ಈ ಪ್ರದೇಶದಲ್ಲಿ ಹೇರಳವಾಗಿ ಕಂಡುಬರುವ ಸಾಮಾನ್ಯ ಪರಿಮಳಯುಕ್ತ ಗಿಡಮೂಲಿಕೆ (ಲ್ಯೂಕಾಸ್ ಆಸ್ಪೆರಾ).

ಪ್ರಸ್ತುತ ಪಟ್ಟಣವನ್ನು ಮೈಸೂರು ರಾಜಮನೆತನದ ಕಾಂಟೆ ಅರಸು ನಿರ್ಮಿಸಿದನೆಂದು ಹೇಳಲಾಗುತ್ತದೆ ಮತ್ತು ಈ ಪ್ರದೇಶವನ್ನು ಸ್ಪಷ್ಟವಾಗಿ ತುಂಬೆ ಎಂದು ಕರೆಯಲಾಗುತ್ತಿತ್ತು. ಅವರು ಪಟ್ಟಣಕ್ಕೆ ಊರು ಸೇರಿಸುವುದರೊಂದಿಗೆ ಅದೇ ಹೆಸರನ್ನು ಮುಂದುವರೆಸಿದ್ದಾರೆAದು ತೋರುತ್ತದೆ. ಇದನ್ನು ತು ಮ್ಮೆ-ಊರು ಅಥವಾ ತು ಂಬೆ-ಊರು ಎಂದು ಕರೆಯಲಾಯಿತು. ಇದನ್ನು ಕಾಲಕ್ರಮೇಣ ತುಮಕೂರು ಕರೆಯಲಾಗುತ್ತಿದೆ.

**ರಾಜಕೀಯ ಹಿನ್ನೆಲೆ**

ಸ್ಥಳಪುರಾಣಗಳ ಪ್ರಕಾರ ಶ್ರೀರಾಮನು ಸೀತೆಯೊಡನೆ ಬಂದುದ್ದನ್ನು ಕ್ರೀತಪುರ (ತುಮಕೂರು ಬಾಹ್ಯವಲಯ) ಸ್ಮರಿಸುತ್ತದೆ. ಅಲ್ಲದೆ ಶಾತವಾಹನರು, ಕದಂಬರು, ರಾಷ್ಟ್ರಕೂಟರು, ಗಂಗರು, ಕಲ್ಯಾಣದ ಚಾಲುಕ್ಯರು, ಹೊಯ್ಸಳರು, ವಿಜಯನಗರದ ಅರಸರು, ಆದಿಲ್ ಶಾಹಿಗಳು, ಮರಾಠರು, ಬ್ರಿಟಿಷರು, ಮೈಸೂರು ಒಡೆಯರ್, ಹೈದರ್ ಅಲಿ, ಟಿಪುಂಪ ಆಳ್ವಿಕೆ ನಡೆಸಿರುವ ಪ್ರದೇಶಗಳಿವೆ.

ಈ ಪ್ರದೇಶದ ರಾಜಕೀಯ ಮತ್ತು ಆಡಳಿತ ಇತಿಹಾಸ ನೋಡಿದಲ್ಲಿ ಕ್ರಿ.ಶ.೫-೧೦ನೇ ಶತಮಾನದವರೆಗೆ ಗಂಗವಾಡಿಯ ಗಂಗರು, ಕ್ರಿ.ಶ.೧೧ನೇ ಶತಮಾನದಲ್ಲಿ ನೊಳಂಬರು, ಕ್ರಿ.ಶ.೧೧-೧೨ನೇ ಶತಮಾನದಲ್ಲಿ ಚೋಳರು, ಕ್ರಿ.ಶ.೧೦೧೭-೧೧೦೦ ರವರೆಗೆ ಹೊಯ್ಸಳರು, ಕ್ರಿ.ಶ.೧೪ನೇ ಶತಮಾನದಲ್ಲಿ ವಿಜಯನಗರದ ಅರಸರು, ಕ್ರಿ.ಶ.೧೬-೧೭ನೇ ಶತಮಾನದಲ್ಲಿ ವಿಜಾಪುರದ ಆದಿಲ್ ಶಾಹಿಗಳು, ಕ್ರಿ.ಶ.೧೭ನೆಯ ಶತಮಾನ ಅಂತ್ಯದಲ್ಲಿ ಔರಂಗಜೇಬನ ಪ್ರಭಾವದಲ್ಲಿ ಮೊಘಲ್ ಫೌಜುದಾರರು, ಕ್ರಿ.ಶ.೧೭ನೆಯ ಅಂತ್ಯ ಹಾಗೂ ೧೮ರ ಪ್ರಾರಂಭದಲ್ಲಿ ಚಿಕ್ಕದೇವರಾಯ ಒಡೆಯರ್ ಆಡಳಿತ, ಕ್ರಿ.ಶ.೧೭೬೧ ಹೈದರ್ ಆಲಿಯ ವಶ ನಂತರ ಟಿಪ್ಪುಠಿಪ ಸುಲ್ತಾನನ ಅವಸಾನದ ನಂತರದಲ್ಲಿ ಮೈಸೂರಿಗೆ ಸೇರಿತು, ಕ್ರಿ.ಶ.೧೮೧೧-೩೧ ಕೃಷ್ಣರಾಜ ಒಡೆಯರ್‌ರವರು ಆಳ್ವಿಕೆ ನಡೆಸಿದ್ದಾರೆ.

ಬ್ರಿಟಿಷ್ ಆಳ್ವಿಕೆಯಲ್ಲಿ ಬೌರಿಂಗ್ ರಾಜ್ಯವನ್ನು ೮ ಜಿಲ್ಲೆಗಳಾಗಿ ವಿಂಗಡಿಸಿ ಅವುಗಳನ್ನು ೩ ವಿಭಾಗಗಳಾಗಿ ವರ್ಗೀಕರಸಲಾಯಿತು, ೧೮೭೯ ರಲ್ಲಿ ಆಯೋಗವನ್ನು ಪುನರಚಿಸಿದಾಗ ಇಡೀ ರಾಜ್ಯಕ್ಕೆ ಒಬ್ಬ ಆಯುಕ್ತರನ್ನು, ಜಿಲ್ಲೆಗೆ ಜಿಲ್ಲಾಧಿಕಾರಿಗಳನ್ನು, ಉಪವಿಭಾಗಕ್ಕೆ ಸಹಾಯಕ ಆಯುಕ್ತರನ್ನು, ತಾಲ್ಲೋಕುಗಳಿಗೆ ಅಮಲ್ದಾರರನ್ನು ನೇಮಿಸಲಾಯಿತು, ೧೯೫೬ ರಲ್ಲಿ ರಾಜ್ಯ ಪುನರ್ವಿಂಗಡಣಾ ಕಾಯ್ದೆ ಅನ್ವಯ ಮೈಸೂರು ರಾಜ್ಯ ರಚಿಸಲಾಯಿತು, ನಂತರ ಮೈಸೂರು ರಾಜ್ಯವನ್ನು ೧೦ ರಿಂದ ೧೯ ವಿಭಾಗಗಳನ್ನಾಗಿ ಮಾಡಲಾಯಿತು ಅದರಲ್ಲಿ ತುಮಕೂರು ಸಹ ಒಂದಾಗಿದೆ. ಹೀಗೆ ತುಮಕೂರು ಆಯಾ ರಾಜವಂಶದವರ ಕಾಲಕ್ಕೆ ಬೆಳವಣಿಗೆಯಾಗಿರುವುದನ್ನು ಶಾಸನ ಆಧಾರಗಳಿಂದ ಗುರುತಿಸಬಹುದಾಗಿದೆ.

**ತುಮಕೂರು ಜಿಲ್ಲೆಯ ಕೆಲವು ಸಾಂಸ್ಕೃತಿಕ ಪರಂಪರೆ ಕೇಂದ್ರಗಳು**

**ಸಿದ್ದಗಂಗಾ**

ತುಮಕೂರು ಜಿಲ್ಲೆಯು ಸಾಂಸ್ಕ್ಠಿತಿಕವಾಗಿ ಧಾರ್ಮಿಕವಾಗಿ ಅತ್ಯಂತ ಸಮೃದ್ದವಾಗಿದೆ. ತುಮಕೂರು ಜಿಲ್ಲೆಯಲ್ಲಿ ವೀರಶೈವ ಧರ್ಮವು ಮತ್ತೆ ಪ್ರಸಾರದ ನೆಲೆಯಂತೆ ಕೆಲಸಕಾರ್ಯಗಳನ್ನು ನೆರವೇರಿಸಿದೆ. ವೀರಶೈವ ಧರ್ಮ ವಿವಿಧ ಸಂಪ್ರದಾಯದ ಅನೇಕ ಮಠಗಳು ಸ್ಥಾಪಿತವಾಗಲು ಕಾರಣವಾಗಿದೆ.

ತುಮಕೂರು ಜಿಲ್ಲೆಯ ಸಿದ್ದಗಂಗಾ ಮಠವು ತನ್ನದೇ ಆದ ಚಾರಿತ್ರಿಕ ಇತಿಹಾಸವನ್ನು ಹೊಂದಿದೆ. ಈ ಮಠದ ಇತಿಹಾಸವನ್ನು ತಿಳಿಯಬೇಕಾದರೆ ಹಲವಾರು ಆಧಾರಗಳಿವೆ. ಅವುಗಳಲ್ಲಿ ಸಮಕಾಲೀನ ಸಾಹಿತ್ಯ ಕೃತಿಗಳೇ ಆಗಿವೆ. ಅವುಗಳಲ್ಲಿ ಸುವ್ವಿ ಮಲ್ಲಿಗೆ ವಡೇರನ ತೋಂಟದ ಸಿದ್ದೇಶ್ವರ ಸಾಂಗತ್ಯ ಯತಿ ಬಸವಲಿಂಗ ವಿರಚಿತ ತೋಂಟದ ಸಿದ್ದೇಶ್ವರ ಸಾಂಗತ್ಯ ಹೇರಂಬ ವಿರಚಿತ ಸಿದ್ದಲಿಂಗೇಶ್ವರ ಸಾಂಗತ್ಯ ಚನ್ನವೀರ ಜಂಗಮರ ಷಟ್‌ಸ್ಥಲ ವಲ್ಲಭ ಅಲ್ಲದೇ ನಿರಂಜನ ವಂಶ ರತ್ನಾಕರ ಇವಿಷ್ಟು ಕೃತಿಗಳಿಂದ ಸಿದ್ದಗಂಗಾ ಮಠದ ಪುರಾವೆಗಳನ್ನು ತಿಳಿದುಕೊಳ್ಳಲು ಸಾಧ್ಯವಾಗಿದೆ. ಶ್ರೀ ಸಿದ್ದಗಂಗಾ ಮಠದ ಹಿನ್ನೆಲೆಯನ್ನು ತಿಳಿಸುವಂತಹ ವಿಚಾರವನ್ನು ಬಿ.ಭೀಮರಾಜು ಎಂಬುವವರು ೧೯೫೯ ರಲ್ಲಿ ಒಂದು ಕೃತಿಯಲ್ಲಿ ಬರೆದಿದ್ದಾರೆ. ಅದೇ ಮಾದರಿಯಲ್ಲಿ ೧೮೯೪ ರ ಸಂದರ್ಭದಲ್ಲಿ

*Copyright © 2025, Scholarly Research Journal for Interdisciplinary Studies*

ತುಮಕೂರು ನಂಜುAಡ ಶಿವಯೋಗಿಗಳಿಂದ ರಚಿತವಾದ ಅಟವೀಶ್ವರ ಚರಿತ್ರೆಯೂ ಕೂಡ ಸಿದ್ಧಗಂಗಾ ಮಠದ ಹಿನ್ನೆಲೆಯನ್ನು ತಿಳಿಸುತ್ತದೆ.

ಸಿದ್ಧಗಂಗಾ ಮಠವೂ ಕೂಡ ತನ್ನದೇ ಆದ ಚಾರಿತ್ರಿಕ ಹಿನ್ನೆಲೆಯನ್ನು ಪಡೆದುಕೊಂಡಿದೆ. ಇದೊಂದು ಪುರಾಣ ಪ್ರಸಿದ್ಧ ಐತಿಹಾಸಿಕ ಮತ್ತು ಧಾರ್ಮಿಕ ಕ್ಷೇತ್ರವಾಗಿ ಲಕ್ಷಾಂತರ ಭಕ್ತರನ್ನು ಆಕರ್ಷಿಸುತ್ತದೆ. ಇಲ್ಲಿರುವ ಬೆಟ್ಟದ ಮೇಲೆ ಸಿದ್ಧಲಿಂಗೇಶ್ವರರ ದೇವಾಲಯವಿದೆ. ಈ ದೇವಾಲಯದ ಮುಂದೆ ಒಂದು ಸಿದ್ಧಗಂಗಾ ತೀರ್ಥವಿದೆ. ಈ ಬೆಟ್ಟದ ತಪ್ಪಲಲ್ಲಿ ನಿಸರ್ಗ ಸೌಂದರ್ಯದ ಮಧ್ಯೆ ಗೋಸಾಲ ಸಿದ್ದೇಶ್ವರ ಮತ್ತು ತೋಂಟದ ಸಿದ್ಧಲಿಂಗೇಶ್ವರರ ಪರಂಪರೆಯ ಪುರಾತನ ವೀರಶೈವ ಮಠವಿದೆ ಇದೊಂದು ಹಲವಾರು ಮಹಾಮಹಿಮರ ಮತ್ತು ಶಿವರಣರ ಜನ್ಮ ಮತ್ತು ತಪೋಭೂಮಿ. ಮಹಾಶಿವಯೋಗಿಗಳು, ಚರಿತ್ರೆ ಪುರುಷರು ಆದ ಗೋಸಲ ಸಿದ್ದೇಶ್ವರರು ಧರ್ಮ ಪ್ರಚಾರಾರ್ಥವಾಗಿ ದೇಶ ಸಂಚಾರ ಮಾಡುತ್ತಾ ಇಲ್ಲಿಗೆ ಬಂದು ತಮ್ಮ ಜತೆಯ ನೂರಾ ಒಂದು ಗಣಂಗಳಿಗೆ ಈ ಕ್ಷೇತ್ರದ ಬೆಟ್ಟದಲ್ಲಿ ೧೦೧ ಗುಹೆಗಳನ್ನು ಮಾಡಿಕೊಟ್ಟು ತಾವು ಒಂದು ಗುಹೆಯಲ್ಲಿ ಶಿವಯೋಗ ನಿಷ್ಠರಾಗಿ ಇರಲು ಪ್ರಾರಂಭಿಸಿದರು.

ಒಂದು ದಿನ ಮಧ್ಯರಾತ್ರಿ ಒಬ್ಬ ವೃದ್ಧ ಗಣಂಗಳಿಗೆ ಜಲದ ಅಪೇಕ್ಷೆಯಿಂದ ತಮ್ಮ ಲಿಂಗವು ಕಳವಳಗೊಂಡು ಅವರು ಗೋಸಲ ಸಿದ್ದೇಶ್ವರನನ್ನು ಧ್ಯಾನಿಸಲು ಸಿದ್ದೇಶ್ವರರು ಪರಶಿವನ ಜಟಾಗಂಗೆಯನ್ನು ನೆನೆದು ಬೆಟ್ಟದ ಮೇಲೆ ಈಗಿರುವ ಪವಿತ್ರ ಸ್ಥಳದಲ್ಲಿ ತಮ್ಮ ಕೈಯಿಂದ ಬಂಡೆಯನ್ನು ಬಗೆದಾಗ ಗಂಗೆಯು ಉದ್ಭವಿಸಿದ ಕಾರಣದಿಂದ ಈ ಕ್ಷೇತ್ರಕ್ಕೆ ಸಿದ್ಧಗಂಗಾ ಎಂಬ ಪವಿತ್ರ ಹೆಸರು ಬಂದಿದೆ ಎಂಬುದು ಎಲ್ಲಾ ಜನರ ಭಕ್ತರ ಅನಿಸಿಕೆಗಳಾಗಿವೆ. ಪ್ರತಿವರ್ಷ ಶಿವರಾತ್ರಿಯಲ್ಲಿ ಶ್ರೀ ಸಿದ್ಧಲಿಂಗೇಶ್ವರ ಸ್ವಾಮಿಯವರ ಜಾತ್ರೆ ರಥೋತ್ಸವ ನಡೆಯುತ್ತದೆ.

ಸಿದ್ಧಗಂಗಾ ಮಠದಲ್ಲಿರುವ ಹಳೆ ಗದ್ದಿಗೆ ಸಿದ್ಧಗಂಗಾ ಮಠವು ಪೂರ್ವಾಭಿಮುಖವಾಗಿ ಮತ್ತು ಉತ್ತರಾಭಿಮುಖವಾಗಿ ಹಳೆ ಗದ್ದಿಗೆಯಲ್ಲಿ ಒಂದು ದೇವಾಲಯವಿದೆ ಹಾಗೂ ಗದ್ದಿಗೆ ಇದೆ. ಎರಡು ಸಾಲುಗಳಿರುವ ಆರು ಕಂಬಗಳಿವೆ. ಮುಂಭಾಗದಲ್ಲಿ ದ್ವಾರಮಂಟಪವಿದೆ. ಪಶ್ಚಿಮ ದಿಕ್ಕಿನಲ್ಲಿ ಒಂದು ಗುಡಿ ಇದೆ ಉತ್ತರ ದಿಕ್ಕಿಗೆ ಒಂದು ದ್ವಾರವಿದ್ದು, ದ್ವಾರದ ಇಕ್ಕೆಲಗಳಲ್ಲಿ ನಾಲ್ಕು ಕಂಬಗಳಿವೆ. ಪ್ರಕಾರಕ್ಕೆ ಒಂದು ದ್ವಾರವಿದ್ದು ಮೆಟ್ಟಿಲುಗಳನ್ನು ಸೇರಿಸಲಾಗಿದೆ. ಇಲ್ಲಿರುವ ಒಂದು ಮಂಟಪದಲ್ಲಿ ನಾಲ್ಕು ಕಂಬಗಳಿವೆ. ಈ ನಾಲ್ಕು ಕಂಬಗಳಲ್ಲಿ ಶೈವ ದ್ವಾರಪಾಲಕರು ಸರ್ಪ, ಕಮಲದ ಕೆತ್ತನೆ ನರ್ತನ ಭಂಗಿ, ಗಣಪತಿ, ನಂದಿ, ಗಣಪತಿ ಋಷಮುನಿ, ಶಿವಲಿಂಗ ವ್ಯಾಳವಾರಿ ಬಸವ ಮೊದಲಾದ ಉಬ್ಬು ಶಿಲ್ಪಗಳಿವೆ.

ಸಿದ್ಧಗಂಗೆಯ ಜಾತ್ರೆ ವಿಶೇಷವಾಗಿರುತ್ತದೆ. ಪ್ರತಿವರ್ಷವೂ ಮಾಘಮಾಸ (ಫೆಬ್ರುವರಿ ಕೊನೆಯ ವಾರ ಆರಂಭವಾಗಿ ಹನ್ನೊಂದು ದಿನಗಳವರೆಗೆ ನಡೆಯುತ್ತದೆ. ಮೊದಲ ದಿನ ಗೋಸಲ ಸಿದ್ದೇಶ್ವರ ದೇವರ ಪಲ್ಲಕ್ಕಿಯೊಂದಿಗೆ ಆರಂಭವಾಗಿ ಪ್ರತಿದಿನವು ಬೇರೆ ಬೇರೆ ರೀತಿಯ ಕಾರ್ಯಕ್ರಮಗಳು, ಉತ್ಸವಗಳು ನಡೆಯುತ್ತದೆ ಹಾಗೂ ಕೊನೆಯ ದಿನದಂದು ರಥೋತ್ಸವ, ಬೆಳ್ಳಿ ಪಲ್ಲಕ್ಕಿ ಉತ್ಸವ, ತೆಪ್ಪೋತ್ಸವಗಳು ಜರುಗುತ್ತಿರುತ್ತವೆ. ಅಲ್ಲದೆ ಶಿವಾನುಭವ ಸಮ್ಮೇಳನ ನಡೆಯುತ್ತದೆ. ವಿಶೇಷ ಆಕರ್ಷಣೆಯೆಂದರೆ ದನಗಳ ಜಾತ್ರೆ, ಅದರಲ್ಲಿ ಕೃಷಿ ವಸ್ತು ಪ್ರದರ್ಶನ, ನಂದಿ ಕುಣಿತ, ಲಿಂಗ ಬೀರರ

*Copyright © 2025, Scholarly Research Journal for Interdisciplinary Studies*

ಕುಣಿತ, ಕರಡಿ ವಾಹನ, ಚಕ್ಕಮೇಳಗಳು ನಡೆಯುತ್ತಿರುತ್ತವೆ. ಆದುದರಿಂದ ಪ್ರವಾಸಿಗರು ಭಕ್ತರು ಇನ್ನಿತರರು ಸಾಕಷ್ಟು ಸಂಖ್ಯೆಯಲ್ಲಿ ಬರುತ್ತಾರೆ.

ಸಿದ್ಧಗಂಗಾ ಕ್ಷೇತ್ರವೂ ಅತ್ಯಂತ ಪ್ರಾಚೀನವಾಗಿದ್ದರೂ ಅಲ್ಲಿ ಅನೇಕ ಸಿದ್ಧರ ಗುಹೆಗಳಿದ್ದವು. ಆದರೆ ಅಲ್ಲಿ ಮಠ ಸ್ಥಾಪನೆಯೂ ಎಡೆಯೂರ ಸಿದ್ಧಲಿಂಗೇಶ್ವರರಿAದಲೇ ಆಯಿತು ಮತ್ತು ಅದಕ್ಕೆ ಆ ಸ್ಥಳದ ಹೆಸರೂ ಸಹ ಬಂದಿತು. ಹರದನಹಳ್ಳಿ ಪೀಠಾಚರ್ಯರಾದ ಸಿದ್ಧಲಿಂಗೇಶ್ವರರು ನಾವು ಬಿಡಾರ ಮಾಡಿದ ಸ್ಥಳಗಳೆಲ್ಲವೂ ಆ ಭಾಗದ ಜನರ ಆಚಾರ-ವಿಚಾರ, ಶುದ್ಧಿಗೆ ಒಬ್ಬ ವಿರಕ್ತರನ್ನು ನೆಲೆಗೊಳಿಸುತ್ತಿದ್ದರು. ವಿರಕ್ತರ ನೆಲೆಗಳೇ ಮಠಗಳಾಗಿ ಮುಂದುವರೆಯುತ್ತಿದ್ದವು. ಆ ಮಠಗಳ ಸಂಪತ್ತು ಸುತ್ತಮುತ್ತಲಿನ ಜನಗಳೇ ಆಗಿರುತ್ತಿದ್ದರು.

ಈ ಪದ್ಯದಿಂದ ಸಿದ್ಧಲಿಂಗೇಶ್ವರರು ವಿರಕ್ತ ಮಠ ಸಂಪ್ರದಾಯವನ್ನು ಹೇಗೆ ಬೆಳೆಸಿ ಭೂಶುದ್ಧಿ ಮಾಡುತ್ತಿದ್ದರೆನ್ನಬಹುದು. ಈ ವಿರಕ್ತರು ವಾಸಿಸುವ ಸ್ಥಳಗಳೆಲ್ಲಾ ಮಠಗಳೇ ಆದವು. ಮಠ ಶಬ್ದವೆನ್ನಿಲ್ಲಿ ಜಂಗಮರು ವಾಸ ಮಾಡುವ ಮನೆಯೇ ಎಂದು ತಿಳಿಯಬೇಕು. ಜಂಗಮರನ್ನು ನೆಲೆಗೊಳಿಸುವುದು ಒಂದು ಮಠ ಸ್ಥಾಪಿಸಿದರೆನ್ನುವುದು ಒಂದೇ ಆದುದರಿಂದ ಬೆಟ್ಟದ ಮೇಲಿನ ಸಿದ್ಧಲಿಂಗೇಶ್ವರ ದೇವಾಲಯ ಕಟ್ಟಡದ ಸುತ್ತಮುತ್ತಲಿರುವ ಗುಹಾಲಯ ಕಟ್ಟಡವನ್ನು ಸಿದ್ಧಗಂಗೆಯ ಪ್ರಾಚೀನ ಮಠವೆಂದು ತಿಳಿಯಬೇಕಾಗಿದೆ. ಅಲ್ಲಿಯೇ ಎಡೆಯೂರು ಸಿದ್ಧಲಿಂಗೇಶ್ವರರು ಮಠವನ್ನು ಸ್ಥಾಪಿಸಿ ವಿರಕ್ತನೊಬ್ಬರನ್ನು ನೆಲೆಗೊಳಿಸಿ ದೇಶ ಸಂಚಾರಕ್ಕೆ ಹೊರಟು ಹೋದರು.

ಶ್ರೀ ಸಿದ್ಧಗಂಗಾ ಮಠವು ವಿರಕ್ತ ಸಂಪ್ರದಾಯ ಮಠ. ಇದು ಜಂಗಮಮೂರ್ತಿ ಪ್ರಸಿದ್ಧಾ ದಾಸೋಹಿ ವಿದ್ಯಾದಾನಿ ಪ್ರಣವ ಸ್ವರೂಪಿ, ನಡೆದಾಡುವ ದೇವರು ಡಾ.ಶ್ರೀ ಶಿವಕುಮಾರ ಸ್ವಾಮಿಗಳಿಂದ ಅಂತರರಾಷ್ಟ್ರೀÃಯ ಮಟ್ಟದಲ್ಲೂ ಪ್ರಸಿದ್ಧಿಯನ್ನು ಪಡೆದಿತ್ತು. ದಕ್ಷಿಣಕಾಶಿ ಎಂದೇ ಪ್ರಸಿದ್ಧಿಯಾದ ನಿಸರ್ಗ ನಿರ್ಮಿತಗಳಿಂದ ಅಂತರರಾಷ್ಟ್ರೀÃಯ ಮಟ್ಟದಲ್ಲೂ ಪ್ರಸಿದ್ಧಿಯನ್ನು ಪಡೆದಿದೆ.

ಈ ನೆಲೆಯಲ್ಲಿ ಅನೇಕ ಸಿದ್ಧಪುರುಷರು ಆಧ್ಯಾತ್ಮಿಕ ಪುರುಷರು ಶಿವಯೋಗಿಗಳು ಅನುಷ್ಠಾನವನ್ನು ಮಾಡಿದ ಪುಣ್ಯಕ್ಷೇತ್ರ ಇದಾಗಿದೆ. ಚಾಮರಾಜನಗರ ಹರದನಹಳ್ಳಿಯಿಂದ ೧೦೧ ವಿರಕ್ತರ ಜೊತೆ ಲೋಕ ಸಂಚಾರ ಮಾಡುತ್ತ ಶಿವಗಂಗೆಗೆ ಬಂದು ಅಲ್ಲಿಂದ ಸಿದ್ಧಗಂಗೆ ಬೆಟ್ಟಕ್ಕೆ ಬಂದು ನೆಲೆಸಿದರು. ಅನೇಕ ಗವಿಗಳಿಂದ ಆವೃತವಾದ ಈ ಕ್ಷೇತ್ರದಲ್ಲಿ ಆ ಎಲ್ಲಾ ವಿರಕ್ತರು ಗವಿಮಠಗಳಲ್ಲಿ ಅನುಷ್ಠಾನ ಕೈಗೊಂಡರು. ಇದನ್ನು ಕಂಡ ಭಕ್ತ ಜನ ಇವರಿಗಾಗಿ ಮಠವನ್ನು ಕಟ್ಟಿಸಿಕೊಟ್ಟರು. ಗೋಸಲ ಸಿದ್ದೇಶ್ವರರು ಅನುಷ್ಠಾನ ಸಂದರ್ಭದಲ್ಲಿ ಬಾಯಾರಿಕೆಯಿಂದ ಕಂಗೆಟ್ಟ ಸಂದರ್ಭದಲ್ಲಿ ಗುರುಗಳು ತಮ್ಮ ಶಿಷ್ಯ ತಪಸ್ಸು ಮಾಡುತ್ತಿದ್ದ ಜಾಗಕ್ಕೆ ಬಂದು ನೆಲವನ್ನು ಮೀಟಿ ಗಂಗೆಯನ್ನು ಚಿಮ್ಮಿಸಿ ಬಾಯಾರಿಕೆಯನ್ನು ನೀಗಿಸಿದರಂತೆ. ಆದ್ದರಿಂದಲೇ ಇದು ಸಿದ್ಧಗಂಗೆ ಎಂದು ಹೆಸರಾಯಿತು. ತದನಂತರ ಶ್ರೀ ಸಿದ್ಧಲಿಂಗೇಶ್ವರರು ಪೀಠಾಧಿಕಾರಿಗಳಾಗಿ ಸಿದ್ಧಗಂಗಾ ಕ್ಷೇತ್ರವನ್ನು ಅಭಿವೃದ್ಧಿಪಡಿಸಿದರು. ಆಮೇಲೆ ತೋಂಟದ ಸಿದ್ಧಲಿಂಗೇಶ್ವರರು ಮಠವನ್ನು ಧಾರ್ಮಿಕ ಕೇಂದ್ರವನ್ನಾಗಿಸಿದರು. ತದನಂತರ ಶ್ರೀ ರುದ್ರಸ್ವಾಮಿಗಳು, ಶ್ರೀ ಸಿದ್ಧಲಿಂಗಸ್ವಾಮಿಗಳು, ಅಡವಿ ಸ್ವಾಮಿಗಳು ಇವರ ಕಾಲಕ್ಕೆ ಮಠವು ಹೆಚ್ಚಿನ ಮಟ್ಟದಲ್ಲಿ ಅಭಿವೃದ್ಧಿಯಾಯಿತು. ಅಂದು

ಪ್ರಾರಂಭಗೊAಡ ಅನ್ನದಾಸೋಹ ಎಂದೆAದಿಗೂ ನಿಲ್ಲದಿರಲಿ ಎಂದು ಹಾರೈಸಿ ಪ್ರಾರಂಭಿಸಿದ ಅನ್ನದಾಸೋಹ, ಶಿಕ್ಷಣ ದಾಸೋಹ ಸಾವಿರಪಟ್ಟು ಬೆಳೆದು ನಿಂತಿದೆ.

**೪.೩ ಎಡೆಯೂರು**

ಕುಣಿಗಲ್ ತಾಲ್ಲೂಕಿನಲ್ಲಿರುವ ಪ್ರಸಿದ್ಧ ಧಾರ್ಮಿಕ ಕ್ಷೇತ್ರ ಎಡೆಯೂರು ಆಗಿದೆ. ನಾಗಿನಿ ನದಿ ತಟದಲ್ಲಿರುವ ಪುರಾಣ ಪ್ರಸಿದ್ಧ ಎಡೆಯೂರು ಒಂದು ಹೋಬಳಿ ಕೇಂದ್ರವಾಗಿದೆ. ಬೆಂಗಳೂರು, ಹಾಸನ ರಾಷ್ಟ್ರೀÃಯ ಹೆದ್ದಾರಿಯಲ್ಲಿ ಕುಣಿಗಲ್‌ಗೆ ಸುಮಾರು ೧೪ ಕಿಲೋಮೀಟರ್ ದೂರದಲ್ಲಿದೆ. ವಚನಕಾರರು ತತ್ವಜ್ಞಾನಿಗಳು, ಶಿವಯೋಗಿಗಳ ಹಾಗೂ ಮಠಾಧ್ಯಕ್ಷರೂ ಆಗಿದ್ದು, ಜೀವವಿದ್ದಾಗಲೇ ಅಭಿನವ ಅಲ್ಲಮ ಎಂಬ ಖ್ಯಾತಿಗೆ ಪಾತ್ರರಾಗಿದ್ದ ಶ್ರೀ ಸಿದ್ಧಲಿಂಗೇಶ್ವರರ ಗದ್ದುಗೆ ಇರುವ ದೇವಾಲಯವಿದೆ. ಈ ದೇವಾಲಯ ದ್ರಾವಿಡ ಶೈಲಿಯಲ್ಲಿದ್ದು ಇತ್ತೀಚೆಗೆ ನವೀಕರಿಸಲಾಗಿದೆ. ಇದು ತ್ರಿದಳದ್ವಾರ ಮುಖಮಂಟಪ, ನವರಂಗ, ತೆರೆದ ಶುಕನಾಸ ಮತ್ತು ಮೂಲಗರ್ಭಗೃಹಗಳನ್ನು ಹೊಂದಿದೆ. ದೇವಾಲಯದ ಪ್ರಕಾರದ ಸುತ್ತಲೂ ಹಾಗೂ ಶಿಖರದ ಸುತ್ತಲೂ ಸಿದ್ಧಲಿಂಗ ಯತಿಗಳ ಜೀವನದ ವಿವರಣೆಯನ್ನು ಬಿಂಬಿಸುವ ಕಥನ ಶಿಲ್ಪಗಳನ್ನು ಗಾರೆಯಿಂದ ರಚಿಸಲಾಗಿದೆ. ಈ ದೇವಾಲಯವನ್ನು ದಾನಿವಾಸ ಮನೆತನದ ದೊರೆಗಳಾದ ಚೆನ್ನವೀರಪ್ಪ ಒಡೆಯರ್ ನಿರ್ಮಿಸಿದರೆಂದು ಹೇಳಿಕೆಗಳಿವೆ. ಇಲ್ಲಿನ ದೇವಾಲಯದಲ್ಲಿ ಚಿತ್ರಕಲೆ ಇದ್ದುದಾಗಿ ತಿಳಿದುಬರುತ್ತದೆ ರಂಗಮAಟಪದಲ್ಲಿ ರೇಖಾಚಿತ್ರಗಳಿದ್ದುದಕ್ಕೆ ಕುರುಹುಗಳು ಮಾತ್ರ ಕಂಡು ಬರುತ್ತದೆ. ಹೊಳೆಯ ಸಮೀಪದಲ್ಲಿ ಚಿತ್ರಮಠವೊಂದು ಇದ್ದಿತೆಂದೂ ಪ್ರವಾಹ ಬಂದಾಗ ಅಲ್ಲಿನ ಚಿತ್ರಗಳಲ್ಲಿ ನಾಶವಾದವೆಂದೂ ತಿಳಿದುಬರುತ್ತದೆ. ದೇವಾಲಯದ ಹಳೆಯ ರಥದ ಮೇಲೆ ಸಾಕಷ್ಟು ಶಿಲ್ಪಗಳ ಕೆತ್ತನೆಗಳಿವೆ. ಪ್ರಾಯಶಃ ಜಿಲ್ಲೆಯ ಪ್ರಥಮ ಕವಿ ಎಂದರೆ ೧೪೭೦ ರಲ್ಲಿ ಬದುಕಿದ್ದ ಹಾಗೂ ವಿಜಯನಗರದ ವಿರೂಪಾಕ್ಷನ ಕಾಲದಲ್ಲಿದ್ದ ತೋಂಟದ ಸಿದ್ದೇಶ್ವರ ಈತ ಕುಣಿಗಲ್ ಸಮೀಪ ಎಡೆಯೂರಿನಲ್ಲಿ ಸಮಾಧಿಯನ್ನು ಹೊಂದಿದ್ದನು. ಇಂದಿಗೂ ಸಿದ್ಧಲಿಂಗೇಶ್ವರ ದೇವಾಲಯದಲ್ಲಿರುವ ೧೫೦೦ರ ಶಾಸನ ಹಾಗೂ ವಿರೂಪಾಕ್ಷ ಪಂಡಿತನ ಚನ್ನಬಸವ ಪುರಾಣ (೧೫೮೪) ವಿರಕ್ತ ತೋಂಟದಾರ್ಯದ ಸಿದ್ದೇಶ್ವರ ಪುರಾಣ (೧೫೬೦) ಹಾಗೂ ಶಾಂತೀಶ್ವರ ತೋಂಟದ ಸಿದ್ದೇಶ್ವರ ಪುರಾಣ (೧೫೬೧) ಕೃತಿಗಳಿಂದಲೂ ಈ ಎಡೆಯೂರು ಸಿದ್ದಲಿಂಗ ಕ್ಷೇತ್ರದ ಬಗ್ಗೆ ಮಾಹಿತಿಗಳಿವೆ. ಸಿದ್ದೇಶ್ವರನು ರಚಿಸಿರುವ ಷಟ್‌ಸ್ಥಲ ಜ್ಞಾನ ಸಾರಾಮೃತ ಎಂಬ ವಚನ ಗ್ರಂಥದಲ್ಲಿ ೭೦೦ಕ್ಕೂ ಹೆಚ್ಚು ವಚನಗಳಿದ್ದು ಪ್ರತಿ ವಚನವೂ ಮಹಾಲಿಂಗ ಗುರುಶಿವ ಸಿದ್ದೇಶ್ವರ ಪ್ರಭುವೆ ಎಂಬ ಅಂಕಿತದಿAದ ಮುಕ್ತಾಯಗೊಳ್ಳುತ್ತದೆ.

ಧಾರ್ಮಿಕ ತಣವಾದ ಎಡೆಯೂರು ಸಿದ್ದಲಿಂಗೇಶ್ವರ ಕ್ಷೇತ್ರವು ಒಂದು ಪ್ರಮುಖ ಯಾತ್ರಾ ಸ್ಥಳವಾಗಿದೆ. ಸಿದ್ದಲಿಂಗೇಶ್ವರರು ಕ್ರಿ.ಶ.೧೫ನೇ ಶತಮಾನದಲ್ಲಿ ಚಾಮರಾಜನಗರ ಜಿಲ್ಲೆಯ ಹರದನಹಳ್ಳಿಯ ಮಲ್ಲಿಕಾರ್ಜುನ ಮತ್ತು ಜ್ಞಾನಾಂಬೆ ಎಂಬುವರ ದಂಪತಿಗಳ ಪುತ್ರನಾಗಿ ಜನಿಸಿದರು. ಅವರು ತಮ್ಮ ಎಂಟನೇ ವರ್ಷ ಇರುವಾಗಲೇ ಗೋಸಲ ಮಠದ ಗುಬ್ಬಿ ಚನ್ನಬಸವೇಶ್ವರ ಶಿವಯೋಗಿಗಳಿಂದ ದೀಕ್ಷೆ ಪಡೆದರು. ತದನಂತರ ಸುಮಾರು ೭೦೧ ವಿರಕ್ತರೊಂದಿಗೆ ಹಿಮಾಲಯ ಪ್ರದೇಶದಲ್ಲಿ ಸಂಚಾರ ಮಾಡಿ ತದನಂತರ ತುಮಕೂರು ಜಿಲ್ಲೆಯ ಕಗ್ಗೆರೆ ಹತ್ತಿರ ಇರುವ

ತೋಟವೊಂದರಲ್ಲಿ ಕಠಿಣ ತಪಸ್ಸು ಕೈಗೊಂಡರು. ತದನಂತರ ಇಲ್ಲಿರುವ ನಾಗಿನಿ ಎಂಬ ನದಿಯ ಎಡದಂಡೆ ಮೇಲಿರುವ ಎಡೆಯೂರಿನಲ್ಲಿ ಸಜೀವ ಸಮಾಧಿಯಾದರು ಎಂಬ ಹೇಳಿಕೆಗಳಿವೆ. ಎಡೆಯೂರಿನಲ್ಲಿರುವ ಸಿದ್ದೇಶ್ವರ ಗದ್ದುಗೆ ದ್ರಾವಿಡ ಶೈಲಿಯಲ್ಲಿ ದೇವಾಲಯವು ನಿರ್ಮಾಣಗೊಂಡಿದೆ. ಇದೊಂದು ತುಂಬಾನೆ ಆಕರ್ಷಣೆಗೊಂಡಿದೆ. ಕ್ರಿ.ಶ.೧೫೮೦ರ ಕಾಲಕ್ಕೆ ಸೇರಿದ ಒಂದು ಶಾಸನವಿದೆ. ಸಿದ್ದಲಿಂಗರು ಎಡೆಯೂರಿನಲ್ಲಿ ತಮಗೆ ಕಟ್ಟಿಸಿದ ಮಠದಲ್ಲಿ ಶಿವಯೋಗ ಸಮಾಧಿ ಹೊಂದಿದರೆAದೂ ತಿಳಿಯುತ್ತದೆ. ಅಂದರೆ ಈಗಿರುವ ಕಟ್ಟಡವು ಯಾವುದೇ ದೇವರಿಗಾಗಿ ನಿರ್ಮಿಸಿದ ದೇವಸ್ಥಾನವಲ್ಲ. ಅದರ ಬದಲಾಗಿ ತೋಂಟದ ಸಿದ್ದಲಿಂಗೇಶ್ವರರ ಸಜೀವ ಸಮಾಧಿ ಎಂಬುದರಲ್ಲಿ ಯಾವುದೇ ತರಹದ ಸಂಶಯಪಡಬೇಕಾಗಿಲ್ಲ. ಈ ಹಿನ್ನೆಲೆಯನ್ನು ಗಮನಿಸಿದರೆ ಕ್ರಿ.ಶ.೧೫೮೦ ರ ಕಾಲಕ್ಕೆ ಎಡೆಯೂರಿನಲ್ಲಿ ವಿರಕ್ತ ಮಠ ಮತ್ತು ಕಲ್ಲುಮಠಗಳಿದ್ದವೆಂದು ತಿಳಿಯಬಹುದಾಗಿದೆ.

ಯುಗಾದಿಯಂದು ಎಡೆಯೂರು ಜಾತ್ರೆ ಪ್ರಾರಂಭವಾಗುತ್ತದೆ. ಹಬ್ಬದ ನಂತರ ೭ನೇ ದಿನ ಮಹಾ ರಥೋತ್ಸವ ನಡೆಯುತ್ತದೆ. ಶಿವರಾತ್ರಿ, ಶ್ರಾವಣ ಕಾರ್ತಿಕ ಮಾಸದ ಅಮವಾಸ್ಯೆಯಲ್ಲಿ ವಿಶೇಷ ಪೂಜೆ, ಕಡೆಯಲ್ಲಿ ಕಾರ್ತಿಕ ಸೋಮವಾರ ಲಕ್ಷ ದೀಪೋತ್ಸವ ನಡೆಯುತ್ತದೆ. ಲಕ್ಷ ದೀಪೋತ್ಸವಕ್ಕೆÀ ಭಕ್ತರು ಪಾದಯಾತ್ರೆಯಲ್ಲಿ ಪ್ರತಿವರ್ಷ ಬರುತ್ತಾರೆ. ಇದು ಸುಮಾರು ೪೦ ವರ್ಷಗಳಿಂದಲೂ ನಡೆದುಕೊಂಡುಬAದಿದೆ.

ನಿತ್ಯ ಬೆಳಿಗ್ಗೆ ಮಧ್ಯಾಹ್ನ ಹಾಗೂ ರಾತ್ರಿ ಭಕ್ತರಿಗೆ ಉಚಿತ ದಾಸೋಹದ ವ್ಯವಸ್ಥೆ ಇದೆ. ಸರಳ ವಿವಾಹಗಳಿಗೂ ಇಲ್ಲಿ ಅವಕಾಶವಿದೆ. ಅದಕ್ಕಾಗಿ ಕಲ್ಯಾಣ ಮಂಟಪವಿದೆ. ಅದಕ್ಕೆ ಮುಂಚಿತವಾಗಿಯೇ ಹೆಸರು ನೋಂದಾಯಿಸಿಕೊಳ್ಳಬೇಕು. ಭಕ್ತರು ವಾಸ್ತವಕ್ಕೆ ಕೊಠಡಿಗಳ ಸೌಲಭ್ಯವೂ ಇದೆ. ಆದುದರಿಂದ ಇದೊಂದು ಪ್ರಮುಖ ಧಾರ್ಮಿಕ ಯಾತ್ರಾಸ್ಥಳವಾಗಿದೆ.

ಎಡೆಯೂರಿನಲ್ಲಿ ಒಂದು ಶಿವ ಪರಂಪರೆಗೆ ಪೂರಕವಾದ ಒಂದು ಪ್ರಾಚೀನ ದೇವಾಲಯವಿದೆ. ಈ ದೇವಾಲಯವು ಉತ್ತರಾಭಿಮುಖವಾಗಿದೆ. ಮೂಲಗರ್ಭಗುಡಿಯಲ್ಲಿ ಶಿವಲಿಂಗವನ್ನು ಸ್ಥಾಪಿಸಲಾಗಿದೆ. ಮುಂಭಾಗದಲ್ಲಿ ಒಂದು ನಂದಿಯ ಶಿಲ್ಪವನ್ನು ಇರಿಸಲಾಗಿದೆ. ಮತ್ತೊಂದು ಮಂಟಪವಿದೆ. ಈ ಮಂಟಪಕ್ಕೆ ಸುಮಾರು ೧೨ ಕಂಬಗಳಿವೆ. ಮಧ್ಯದಲ್ಲಿ ಮಾತ್ರ ಎರಡು ಕಂಬಗಳು, ಗೋಡೆ ಸೇರಿದಂತೆ ಆರು ಕಂಬಗಳು ಮುಂಭಾಗದಲ್ಲಿ ನಾಲ್ಕು ಕಂಬಗಳು ಈ ಮಂಟಪವು ಪೂರ್ವಾಭಿಮುಖವಾಗಿದೆ. ಮುಂಭಾಗದಲ್ಲಿ ಮೆಟ್ಟಿಲುಗಳಿದ್ದು ಇಕ್ಕೆಲಗಳಲ್ಲಿ ಆನೆಮುಖವನ್ನು ಹೊಂದಿರುವ ಚಪ್ಪಡಿಗಳನ್ನು ಸೇರಿಸಲಾಗಿದೆ. ಮೇಲ್ಭಾಗದಲ್ಲಿ ಸುತ್ತಲೂ ನಾಲ್ಕು ನಂದಿ ಶಿಲ್ಪಗಳಿವೆ.

ಯಡೆಯೂರಿನ ತೇರಿನಲ್ಲಿ ವಿಭಿನ್ನ ಮಾದರಿಯ ಉಬ್ಬುಶಿಲ್ಪಗಳಿವೆ. ಶ್ರೀ ಸಿದ್ದಲಿಂಗ ಸ್ವಾಮಿಗಳ ಗದ್ದಿಗೆ ಇರುವ ಈ ಸ್ಥಳದಲ್ಲಿ ಯುಗಾದಿಯ ನಂತರ ನಡೆಯುವ ಜಾತ್ರೆಯಲ್ಲಿ ತೇರು ಎಳೆಯುವ ಕಾರ್ಯಕ್ರಮವಿರುತ್ತದೆ. ಪೂರ್ಣ ಕೂಷ್ಮದಿಂದ ರೂಪಿಸಿದ ತೇರು ನೂರೈವತ್ತು ವರ್ಷಗಳಿಗೂ ಹಿಂದಿನದೆAಬ ಅಭಿಪ್ರಾಯವಿದೆ. ಚಕ್ರಗಳ ಮೇಲೆ ತೇರಿಗೆ ಕೆಳಭಾಗ ದೇವಾಲಯದ ಅಧಿಷ್ಠಾನದಂತಿದ್ದು, ನಾಲ್ಕು ಬದಿಯಲ್ಲಿ ಪಟ್ಟಿಕೆಗಳಂತೆ ರೂಪಿಸಿದ್ದು, ಅವುಗಳಲ್ಲಿ ಉಬ್ಬು ಶಿಲ್ಪಗಳಿವೆ. ಅಧಿಷ್ಠಾನ ಭಾಗದ ಮೂಲೆಗಳಲ್ಲಿ ಸ್ವಲ್ಪ ಹೊರಚಾಚಿದಂತೆ ಅಲ್ಲಲ್ಲಿ ಬಿಡಿಶಿಲ್ಪಗಳನ್ನು

Copyright © 2025, Scholarly Research Journal for Interdisciplinary Studies

ಅಳವಡಿಸಿದೆ. ಅಂತೆಯೇ ಕಂಬ ಭಾಗದಲ್ಲಿಯೂ ಶಿಲ್ಪಗಳಿವೆ. ಹಿಂದಿನ ಪಟ್ಟಿಕೆಯಲ್ಲಿ ಸಾಲಾಗಿ ಹಲವಾರು ಅಂಕಣಗಳನ್ನು ನಿರ್ಮಿಸಿದ್ದು, ಅವುಗಳಲ್ಲಿ ಶಿವ-ಪಾರ್ವತಿಯರ ಕಲ್ಯಾಣ ಮಿಥುನ ದೃಶ್ಯಗಳು, ಕೋಲಾಟವಾಡುತ್ತಿರುವ ಸ್ತ್ರೀÃ ಸಮೂಹ, ರಥದಲ್ಲಿ ದಿಕ್ಪಾಲಕರು ಇತ್ಯಾದಿ ಉಬ್ಬುಶಿಲ್ಪಗಳಿವೆ. ಮುಂಚಾಚಿದ ಗೋಡೆಗಳಲ್ಲಿ ಗಣೇಶ, ವಿಷ್ಣು, ಚಂದ್ರಮೌಳೇಶ್ವರ ಇತ್ಯಾದಿ ದೇವತಾ ಶಿಲ್ಪಗಳಲ್ಲದೆ ಮಗುವನ್ನು ಆಡಿಸುತ್ತಿರುವ ಸ್ತ್ರೀÃಯರು, ವಾದ್ಯ ನರ್ತನಕಾರರು, ಹಾವಾಡಿಗರು ಹಾಗೂ ಮಿಥುನ ಶಿಲ್ಪಗಳನ್ನು ಕಾಣಬಹುದು.

**ಗೊರವನಹಳ್ಳಿ ಮಹಾಲಕ್ಷ್ಮಿ ್ಮÃ ದೇವಾಲಯ**

ಗೊರವನಹಳ್ಳಿ ಶ್ರೀ ಮಹಾಲಕ್ಷ್ಮಿ÷್ಮ ದೇವಾಲಯವು ಕೊರಟಕೆರೆ ತಾಲ್ಲೂಕಿನಲ್ಲಿದೆ. ತುಮಕೂರಿನಿಂದ ಸುಮಾರು ೩೦ ಕಿಲೋಮೀಟರ್ ಅಂತರದಲ್ಲಿದೆ. ಇಲ್ಲಿಯ ಶ್ರೀ ಮಹಾಲಕ್ಷ್ಮಿ÷್ಮÃ ದೇವಾಲಯಕ್ಕೆ ಸಂಬAಧಿಸಿದAತೆ ದಂತ ಕಥೆಯೊಂದು ಈ ರೀತಿ ಇದೆ. ಅಬ್ಬಯ್ಯ ಎಂಬ ಬಡ ವ್ಯಕ್ತಿಗೆ ಶ್ರೀ ಮಹಾಲಕ್ಷ್ಮಿ ್ಮಯ ಆಶಿರ್ವಾದದಿಂದ ಸಂಪತ್ತು ದೂರೆಯಿತು, ಅವರು ದಾನ ಕಾರ್ಯಗಳನ್ನು ಮಾಡಲು ಪ್ರಾರಂಭಿಸಿದರು ಇದರಿಂದ ಅವರ ಮನೆ ಲಕ್ಷ್ಮಿ ್ಮÃನಿವಾಸ ಎಂದು ಕರೆಯಲ್ಪಟ್ಟಿತು, ಅಬ್ಬಯ್ಯನ ಮರಣದ ನಂತರ ತೋಟದಪ್ಪ ಪೂಜೆಗಳನ್ನು ನೆರವೇರಿಸಿದರು, ಅವರ ಕನಸಿನಲ್ಲಿ ಮಹಾಲಕ್ಷ್ಮಿ ್ಮ ತನಗಾಗಿ ಒಂದು ದೇವಾಲಯ ನಿರ್ಮಿಸುವಂತೆ ಕೇಳಿಕೊಂಡಳು ಅದರಂತೆ ತೋಟದಪ್ಪ ದೇವಿಗೆ ದೇವಾಲಯ ನಿರ್ಮಿಸಿ ಪೂಜೆ ಮಾಡಲು ಪ್ರಾರಂಭಿಸಿದರು.

ಗೊರವನಹಳ್ಳಿ ಶ್ರೀ ಮಹಾಲಕ್ಷ್ಮಿ÷್ಮ ದೇವಾಲಯವು ತನ್ನದೇ ಆದ ಚಾರಿತ್ರಿಕ ಇತಿಹಾಸವನ್ನು ಹೊಂದಿದೆ. ೧೯೨೫ ರಲ್ಲಿ ಕಮಲಮ್ಮ ಎಂಬ ಭಕ್ತೆ ಗೊರವನಹಳ್ಳಿಗೆ ಬಂದಾಗ ದೇವಾಲಯ ನಿರ್ಜನ ಸ್ಥಿತಿಯನ್ನು ಕಂಡು ದೇವಿಗೆ ಪೂಜೆ ಸಲ್ಲಿಸಲು ಪ್ರಾರಂಭಿಸಿದರು, ನಂತರ ಅವರು ಆ ಸ್ಥಳದಿಂದ ಹೂರಟರು. ಆದರೆ ೧೯೫೨ರಲ್ಲಿ ಕಮಲಮ್ಮ ಗೋರವನಹಳ್ಳಿಗೆ ಹಿಂತಿರುಗಿಬAದ ಕಮಲಮ್ಮ ದೇವಾಲಯದಲ್ಲಿ ನಿಯಮಿತ ಪೊಜೆಯನ್ನು ನಡೆಸುತ್ತದ್ದರು. ಕಮಲಮ್ಮನ ಮರಣದ ನಂತರ ಅವರ ಮಗ ಪ್ರಸನ್ನ ಪೋಜಾ ಕಾರ್ಯವನ್ನು ಮುಂದುವರಿಸಿಕೊAಡು ಹೊಗುತ್ತಿದ್ದಾರೆ. ಪ್ರತಿ ಶುಕ್ರವಾರದಂದು ವಿಶೇಷ ಪೂಜೆ ನಡೆಯುತ್ತದೆ. ಆದಕಾರಣ ಅಂದು ಸಾಕಷ್ಟು ಸಂಖ್ಯೆಯಲ್ಲಿ ಭಕ್ತರು ಹಾಗೂ ಪ್ರವಾಸಿಗರು ಬರುತ್ತಿದ್ದಾರೆ. ಆದಕಾರಣ ಪ್ರವಾಸಿಗರಿಗೆ ಎಲ್ಲಾ ರೀತಿಯ ಅನುಕೂಲವನ್ನು ನೀಡಲಾಗಿದೆ. ಪ್ರವಾಸಿ ಮಂದಿರಗಳಿವೆ. ಸಮೀಪದಲ್ಲಿಯೇ ತೀರ್ಥ ಜಲಾಶಯವಿದೆ. ಇಲ್ಲಿಗೆ ಬರುವ ಭಕ್ತ ಯಾತ್ರಾರ್ಥಿಗಳಿಗೆ ಪ್ರತಿದಿನ ದಾಸೋಹವನ್ನು ಏರ್ಪಡಿಸಲಾಗಿರುತ್ತದೆ. ಗೊರವನಹಳ್ಳಿ ಮಹಾಲಕ್ಷ್ಮಿ÷್ಮ ದೇವತೆಯನ್ನು ಕಲಿಯುಗದ ದೇವತೆ ಪೂಜಾ ಮಾತೆ ಎಂದು ಕರೆಯುತ್ತಾರೆ.

**ಸಿದ್ದರಬೆಟ್ಟ**

ತುಮಕೂರು ಜಲ್ಲೆ ಕೊರಟಗೆರೆ ತಾಲ್ಲೂಕಿನಿಂದ ೧೫ ಕಿ.ಮಿ ದೂರದಲ್ಲಿರುವ ಸಿದ್ದರ ಬೆಟ್ಟವು ಒಂದು ಪಾರಂಪರಿಕ ನೆಲೆಯಾಗಿದೆ ಎಂದರೆ ತಪ್ಪಾಗಲಾರದು. ಶಿವಯೋಗಿ ಸಿದ್ದೇಶ್ವರರ ತಪೋಭೂಮಿ ಶ್ರೀ ಕ್ಷೇತ್ರ ಸಿದ್ದರಬೆಟ್ಟ, ಈ ಕ್ಷೇತ್ರಕ್ಕೆ ಪೌರಾಣಿಕ, ಐತಿಹಾಸಿಕ, ಆಧ್ಯಾತ್ಮಿಕ, ದಿವ್ಯೌಷಿಧಿಯುಕ್ತ

*Copyright © 2025, Scholarly Research Journal for Interdisciplinary Studies*

ಗಿಡಮೂಲಿಕೆಗಳ ನೈರ್ಗಿಕ ಸಿರಿಸಂಪದದ ಹಿನ್ನೆಲೆ ಇದೆ. ಈ ಹಿನ್ನೆಲೆಯಲ್ಲಿ ಶ್ರೀ ಕ್ಷೇತ್ರ ಸಿದ್ದರಬೆಟ್ಟಕ್ಕೆ ಬೂದಿಗವಿ, ಸುವರ್ಣಗಿರಿ, ರಸಾಸಿದ್ದರಬೆಟ್ಟ, ಬೆಳ್ಳಿಬೆಟ್ಟ ಎಂಬ ಪರ್ಯಾಯ ನಾಮಾಂಕಿತಗಳಿವೆ.

ಈ ಬೆಟ್ಟವು ಇತಿಹಾಸ ಪುರಾಣ ಪ್ರಸಿದ್ದವಾಗಿದ್ದು, ರಾಮಾಯಣದ ಪ್ರಸಿದ್ದ ಸಂಜೀವಿನಿ ಪರ್ವತದ ಭಾಗವೆಂದು ನಂಬಲಾಗಿದೆ. ಇಲ್ಲಿ ಈಗಲೂ ಹಲವು ಅಮೂಲ್ಯ ಆಯುರ್ವೇದ ಸಂಬAಧಿ ಗಿಡಮೂಲಿಕೆಗಳು ದೊರೆಯುತ್ತದೆ. ಇಲ್ಲಿ ಆಯುರ್ವೇದ ಗಿಡಮೂಲಿಕೆಗಳ ಸಸ್ಯೋದ್ಯಾನವೊಂದನ್ನು ಸರ್ಕಾರವೇ ನಿರ್ಮಿಸಿದೆ. ಇಲ್ಲಿನ ಐತಿಹ್ಯದಂತೆ ಆನೆಗೆ ಕಟ್ಟಿದ ಕಬ್ಬಿಣದ ಸರಪಳಿಯ ಅಮೂಲ್ಯ ಗಿಡದ ಸ್ಪರ್ಶದಿಂದ ಚಿನ್ನವಾದ್ದರಿಂದ ಸುವರ್ಣಗಿರಿ ಎಂದಾಯಿತು. ಈ ಬೆಟ್ಟದ ಮೇಲೆ ಹಲವಾರು ಗವಿಗಳಿವೆ. ಅಲ್ಲಿ ಹಲವಾರು ಯೋಗಿಗಳು ತಪಸ್ಸು ಮಾಡಿ ಸಿದ್ದಿ ಪಡೆದಿದ್ದರಿಂದ ಸಿದ್ದರಬೆಟ್ಟವೆಂದೂ ಕರೆಯಲ್ಪಡುತ್ತದೆ. ಬೆಟ್ಟದಲ್ಲಿರುವ ಪ್ರಕೃತಿ ನಿರ್ಮಿತ ಗುಹಾದೇವಸ್ಥಾನ ಮತ್ತು ನೀರಿನ ದೊಣೆಗಳು ಪ್ರಸಿದ್ದವಾಗಿವೆ.

ಸಿದ್ದರಬೆಟ್ಟದ ನೆತ್ತಿಯ ಮೇಲೆ ಕುರಂಗರಾಯನೆAಬ ಶಿವಭಕ್ತ ಪಾಳೆಗಾರನಿಂದ ಕಟ್ಟಲ್ಪಟ್ಟು ಶಿಥಿಲಾವಸ್ಥೆಯಲ್ಲಿ ಕೇವಲ ಕುರುಹಾಗಿ ಉಳಿದಿರುವ ಕೋಟೆ, ಅಣೆಕಟ್ಟು ಹಾಗೂ ಬಂಡೆಯಲ್ಲಿ ನಿರ್ಮಾಣಗೊಂಡಿರುವ ದೊಣೆಯನ್ನು ನೋಡಬಹುದಾಗಿದೆ. ಈತನು ಕಟ್ಟಿದ ಕೋಟೆಯ ಸನಿಹದಲ್ಲಿ ಇರವ ಗಾಮಕ್ಕೆ ಕುರಂಕೋಟೆ ಎಂಬುದಾಗಿ ಹೆಸರು ಬಂದಿರುವುದು ತಿಳಿದುಬರುತ್ತದೆ.

ಆಧ್ಯಾತ್ಮಿಕ ಸಾಧಕರಿಗೆ ಹೇಳಿ ಮಾಡಿಸಿದ ತಾಣ ಶ್ರೀ ಕ್ಷೇತ್ರ ಸಿದ್ದರಬೆಟ್ಟ, ಇಲ್ಲಿಯ ಪ್ರಕೃತಿ ನಿರ್ಮಿತ ಗುಹೆಗಳಲ್ಲಿ ಅನೇಕ ಸಾಧುಸಂತರು, ಋಷಿಮುನಿಗಳು, ಸಿದ್ದಸಾಧ್ಯರು, ಅವಧೂತರು ತಪೋಗೈದು ತಾವು ಪಾವನರಾಗಿ ಸ್ಥಳವನ್ನು ಪಾವನಗೊಳಿಸಿದ್ದಾರೆ.

ಬೆಟ್ಟದ ಮೇಲೆ ಗಂಗೋದ್ಭವಗೋಳ್ಳುವ ಪುಷ್ಕರಣಿ ಇದ್ದು, ಇದು ಶಿವಯೋಗಿಗಳಿಂದ ಪೂಜೆ ಸೇವನೆಗೆ ಸ್ನಾನಾದಿಗಳಿಗೆ ನಿರ್ಮಾಣ ಮಾಡಿದ್ದೆಂದು ತಿಳಿದುಬರುತ್ತದೆ. ಪ್ರಕೃತಿ ಗರ್ಭದ ವಿವಿಧ ಖನಿಜ ಲವಣಾಂಶಗಳೊAದಿಗೆ ಸಸ್ಯ ಸಂಜೀವಿನಿ, ಜೀವ ಸಂಜೀವಿನಿ ಮುಂತಾದ ದವ್ಯ ಔಷಧಿಯುಕ್ತ ಗಿಡಮೂಲಿಕೆಗಳ ಬೇರಿನ ಅಂಶಗಳಿAದ ತುಂಬಿ ಬರುವ ಈ ಗಂಗೆಯ ಸೇವನೆ, ಪ್ರೋಕ್ಷಣೆ, ಸ್ನಾನಾದಿಗಳಿಂದ ಹಲವಾರು ರೋಗಗಳನ್ನು ನಿವಾರಿಸುವ ಶಕ್ತಿ ಈ ತೀರ್ಥಕ್ಕೆ ಇದೆ ಎಂಬ ನಂಬಿಕೆ ಇದೆ. ಶ್ರೀ ಕ್ಷೇತ್ರದ ಪರಿಮಿತಿಯಲ್ಲಿ ಈಶ್ವರ, ಗಂಗಾದೇಶ್ವರ ಗುಡಿ, ದೊಡ್ಡಮ್ಮ, ಕಾವಲಮ್ಮ, ಚೌಡೇಶ್ವರಿ ಗುಡಿ, ವೊಕಾವದೂತರು, ಗಮ¨ದ್ಯ ಹಾಗೂ ತಾತಯ್ಯನ ಗದ್ದಿಗೆಗಳು ಇವೆ.

ಇತ್ತೀಚಿನ ದಿನಗಳಲ್ಲಿ ಶ್ರೀ ಸಿದ್ದೇಶ್ವರ ಸೇವಾಸಮಿತಿ ಭಕ್ತಾಧಿಗಳು ಸಾರ್ವಜನಿಕರ ಅನುಕೂಲಕ್ಕಾಗಿ ಛತ್ರ, ತಂಗುದಾಣ ಹಾಗೂ ಪ್ರತಿದಿನ ನಿತ್ಯಾ ದಾಸೋಹಗಳನ್ನು ನಡೆಸುತ್ತಾ ಬರುತ್ತಿದ್ದಾರೆ. ಬೆಟ್ಟದ ಮೇಲೆ ದೇವಾಲಯಗಳಿವೆ. ಯಾತ್ರಿ ನಿವಾಸ, ಪ್ರವಾಸೋದ್ಯಮ ಇಲಾಖೆಯ ಯಾತ್ರ ನಿವಾಸಗಳಿವೆ. ಸಿದ್ದೇಶ್ವರ ಬೆಟ್ಟದ ಪರಿಸರದಲ್ಲಿ ಬಾಳೆಹೊನ್ನೂರು ಶಾಖಾಮಠವಿದೆ. ಅಲ್ಲಿ ಒಂದು ದೇವಾಲಯವನ್ನು ನಿರ್ಮಿಸಲಾಗಿದೆ.

*Copyright © 2025, Scholarly Research Journal for Interdisciplinary Studies*

**ದೇವರಾಯನ ದುರ್ಗ**

ದೇವರಾಯನದುರ್ಗವು ತುಮಕೂರಿನಿಂದ ಈಶಾನ್ಯ ದಿಕ್ಕಿಗೆ ಸುಮಾರು ೧೫ ಕಿಲೋಮೀಟರ್ ದೂರದಲ್ಲಿದೆ. ಭೌಗೋಳಿಕ ಲಕ್ಷಣಗಳಿಗೆ ಬೆಸೆದುಕೊಂಡಿರುವ ಮಾನವ ಇತಿಹಾಸವು ತನ್ನದೇ ಆದ ವಿಶಿಷ್ಟತೆಯನ್ನು ಪಡೆದುಕೊಂಡಿದೆ. ಈ ತುಮಕೂರು ಜಿಲ್ಲೆಯಲ್ಲಿ ಸಾಕಷ್ಟು ಬೆಟ್ಟಗುಡ್ಡಗಳು ಕಂಡುಬAದಿವೆ.

ದೇವರಾಯನದುರ್ಗವು ೧೨೬೪ ಮೀಟರ್ ಎತ್ತರವನ್ನು ಹೊಂದಿದೆ. ಇಲ್ಲಿ ನೈಸರ್ಗಿಕ ನೀರಿನ ಚಿಲುಮೆಗಳನ್ನು ಬೆಟ್ಟದ ಹಲವು ಭಾಗಗಳಲ್ಲಿ ಕಾಣಬಹುದು. ಅವುಗಳನ್ನು ತೀರ್ಥಗಳೆಂದು ಕರೆಯುತ್ತಾರೆ. ದೇವರಾಯನದುರ್ಗದ ತೀರ್ಥಗಳಲ್ಲಿ ನಾಲ್ಕು ತೀರ್ಥಗಳು ಅತ್ಯಂತ ಪ್ರಮುಖವಾಗಿವೆ. ಶ್ರೀಪಾದತೀರ್ಥ, ಶ್ರೀನರಸಿಂಹತೀರ್ಥ, ಗಜೇಂದ್ರತೀರ್ಥ, ದಕ್ಷನ ಮಗಳಾದ ಜಯಾತೀರ್ಥಗಳೆಂದು ಹೆಸರುವಾಸಿಯಾಗಿವೆ. ಇವುಗಳಿಗೆ ತನ್ನದೆ ಆದ ಚಾರಿತ್ರಿಕ ಹಿನ್ನೆಲೆಗಳಿವೆ.

ದೇವರಾಯನ ಕರಿಗಿರಿ (ಕರಿಗಿರಿ ಕ್ಷೇತ್ರ) ಆನೆ ಬಿದ್ದಸರಿ ಮತ್ತು ಜಡಕನದುರ್ಗ ಎಂದು ಶಾಸನಗಳಲ್ಲಿ ತಿಳಿಸಲಾಗಿದೆ. ಸ್ಥಳೀಯವಾಗಿ ದೊರೆಯುವ ಕಥೆ ಹಾಗೂ ಐತಿಹ್ಯಗಳು ತಿಳಿಸುವಂತೆ ಇದೊಂದು ಶ್ರೀ ವೈಷ್ಣವ ಧಾರ್ಮಿಕ ಕ್ಷೇತ್ರವಾಗಿದೆ. ಈ ಪ್ರದೇಶದ ಗಡಿಯನ್ನು ತಿಳಿಸುವ ಸಂದರ್ಭದಲ್ಲಿ ಹೊಯ್ಸಳರು ಆನೆಬಿಡ್ಡಸರಿ ಎಂಬ ಈ ಸ್ಥಳವನ್ನು ಉಲ್ಲೇಖಿಸಲಾಗಿದೆ. ವಿಜಯನಗರ ಹಾಗೂ ವಿಜಯನಗರೋತ್ತರ ಕಾಲದ ದೇವರಾಯನ ದುರ್ಗದ ಇತಿಹಾಸ ಸುಸ್ಪಷ್ಟವಾಗಿದೆ. ಪೌರಾಣಿಕ ಹಿನ್ನೆಲೆಗೆ ಪುಷ್ಠಿ ದೊರೆತು ವೈಷ್ಣವ ಧಾರ್ಮಿಕ ಕೇಂದ್ರವಾಗಿ ಬೆಳೆದಿರುವುದನ್ನು ಕಾಣಬಹುದು. ವಿಜಯನಗರ ಅರಸರ ಕಾಲದ ಶಿಲಾ ಶಾಸನಗಳು ಹಾಗೂ ತಾಮ್ರಶಾಸನಗಳು ಸೂಚಿಸುವಂತೆ ವಿಜಯನಗರ ಸಾಮ್ರಾಜ್ಯದ ಪ್ರದೇಶವಾದ ದೇವರಾಯದುರ್ಗಕ್ಕೆ ಕೋಟೆಯನ್ನು ನಿರ್ಮಿಸಿ ಸುಸಜ್ಜಿತ ಸೈನ್ಯವನ್ನು ಇಲ್ಲಿ ಇಡಲಾಗಿತ್ತು. ಈ ಸ್ಥಳವನ್ನು ಮೂಲ ಆನೆಬಿಡ್ಡಸರಿ ಎಂದು ಹೇಳಿದೆ ಹಾಗೂ ನಂತರದಲ್ಲಿ ಇಲ್ಲಿ ಆಳಿದ ಜಡಕನೆಂಬ ಪಾಳೆಯಗಾರನಿಂದ ಇದನ್ನು ಜಡಕರಾಯನದುರ್ಗ ಎಂದು ಕರೆಯಲಾಗುತ್ತಿತ್ತು. ನಂತರ ಮೈಸೂರು ಒಡೆಯರ್ ಅರಸರಾದ ಚಿಕ್ಕದೇವರಾಜ ಒಡೆಯರ್ ಅವರ ಒಂದು ಐತಿಹ್ಯದ ಪ್ರಕಾರ ಇಲ್ಲಿ ಅಂಧಕನೆAಬ ದರೋಡೆಕಾರ ವಾಸವಾಗಿದ್ದನೆಂದೂ ಅವನನ್ನು ಲಿಂಗಕ ಎಂದೂ ಕರೆಯಲಾಗುತ್ತಿತ್ತೆಂದೂ ಹೇಳಿಕೆಗಳಿವೆ. ಅದನ್ನು ಯದುಪಟ್ಟಣದ ರಾಜ ಹೇಮಚಂದ್ರನ ಮಗ ರಾಜಕುಮಾರ ಸುಮತಿ ಎಂಬುವನು ಕೊಂಡು ಭೂಮಂದಾನ (ಈಗಿನ ನೆಲಮಂಗಲ) ಎಂಬ ನಗರವನ್ನು ನಿರ್ಮಿಸಿದನೆಂದು ತಿಳಿಯಲಾಗಿದೆ. ಅಲ್ಲಿಂದಲೇ ಈ ಪ್ರದೇಶವನ್ನು ದರೋಡೆ ಮುಕ್ತ ಪ್ರದೇಶವನ್ನಾಗಿ ಮಾಡಿದನೆಂಬ ನಂಬಿಕೆ ಈ ಭಾಗದಲ್ಲಿ ಮನೆ ಮಾಡಿದೆ.

ಹೊಯ್ಸಳರ ಕಾಲಕ್ಕೆ ಬೆಟ್ಟದ ಮೇಲೆ ಆನೆಬಿಡ್ಡಸರಿ ಎಂಬ ಪಟ್ಟಣವಿತ್ತೆಂದು ಹೇಳಿಕೆಗಳಿವೆ. ನಂತರ ವಿಜಯನಗರದ ಅರಸರು ಇಲ್ಲಿ ಹುಟ್ಟುವ ಜಯಮಂಗಲಿ ನದಿಗೆ ಬುಕ್ಕಸಮುದ್ರವೆಂಬ ಕೆರೆ ಕಟ್ಟಿಸಿದರು. ಕ್ರಿ.ಶ.೧೬೩೮ ರಿಂದ ೧೬೫೯ ರವರೆಗೆ ಆಳಿದ ಕಂಠೀರವ ನರಸರಾಜ ಒಡೆಯರ ಭೋಗಲಕ್ಷ್ಮಿ÷ಿಮÃ ನರಸಿಂಹಸ್ವಾಮಿ ದೇವಾಲಯವನ್ನು ದುರಸ್ತಿ ಮಾಡಿದರು. ಕ್ರಿ.ಶ.೧೮೫೮ ರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ್‌ರವರು ಈ ದೇವಾಲಯದ ಗೋಪುರವನ್ನು ನಿರ್ಮಿಸಿದರು.

ವ್ಯಾಸತೀರ್ಥರು ಇಲ್ಲಿಗೆ ಬಂದು ಸ್ವಾಮಿಯನ್ನು ಆರಾಧಿಸಿ ಬೆಲೆಬಾಳುವ ಪಾತ್ರೆಗಳು ಮತ್ತು ಕೆಲವು ಆಭರಣಗಳನ್ನು ನೀಡಿದ್ದಾರೆ.

ಇಲ್ಲಿರುವ ದೇವಾಲಯಕ್ಕೆ ತನ್ನದೇ ಆದ ಇತಿಹಾಸ ಪರಂಪರೆ ಇದೆ. ದೇವರಾಯನದುರ್ಗದ ಶ್ರೀ ಭೋಗಲಕ್ಷ್ಮಿ ನರಸಿಂಹಸ್ವಾಮಿ ದೇವಾಲಯವು ದ್ರಾವಿಡ ಶೈಲಿಯಲ್ಲಿ ನಿರ್ಮಾಣಗೊಂಡಿದ್ದು ಪೂರ್ವಾಭಿಮುಖವಾಗಿದೆ. ಮೊದಲನೆಯ ಕಂಠೀರವ ನರಸರಾಜ ಒಡೆಯರ್‌ರವರು ಕಟ್ಟಿಸಿದ್ದಾರೆಂದು ತಿಳಿದುಬರುತ್ತದೆ. ಆದರೂ ಕೂಡ ಇದು ಚೋಳರ ಕಾಲದ ವಾಸ್ತುಶೈಲಿಯ ಪರಂಪರೆಯನ್ನು ಹೊಂದಿದೆ ಎಂದು ಹೇಳಬಹುದು.

ಭೋಗನರಸಿಂಹಸ್ವಾಮಿ ದೇವಾಲಯವು ಕೆಳಗಿನ ಬೆಟ್ಟದಲ್ಲಿಯೂ ಯೋಗನರಸಿಂಹಸ್ವಾಮಿ ದೇವಾಲಯವು ಮೇಲಿನ ಬೆಟ್ಟದಲ್ಲಿಯೂ ಇದೆ. ಮೇಲಿನ ಬೆಟ್ಟಕ್ಕೆ ಹೋಗುವವರು ಎರಡು ಕಿಲೋಮೀಟರ್ ವಾಹನದಲ್ಲಿ ಹೋಗಿ ಅಲ್ಲಿಂದ ನಡೆದೆ ಹೋಗಬೇಕು. ಹೋಗುವ ರಸ್ತೆಯಲ್ಲಿ ವಾಲಿ, ಸುಗ್ರೀವ ಕಾಳಗದ ಸುಂದರ ಚಿತ್ರಗಳನ್ನು ಬಿಡಿಸಲಾಗಿದ್ದು, ಅವುಗಳು ನೋಡುಗರ ಮನಸೆಳೆಯುತ್ತದೆ. ದೇವರಾಯನದುರ್ಗದ ಅರಣ್ಯ ಪ್ರದೇಶ ಸುಮಾರು ೪೨ ಚದರ ಕಿಲೋಮೀಟರ್ ಹಬ್ಬಿದೆ. ಈ ಅರಣ್ಯ ಪ್ರದೇಶದಲ್ಲಿ ಸುಮಾರು ೨೫೦ಕ್ಕೂ ಹೆಚ್ಚಿನ ಪಕ್ಷಿ ಪ್ರಭೇದಗಳನ್ನು ಗುರುತಿಸಿದ್ದಾರೆ.

ಶ್ರೀಭೋಗಲಕ್ಷ್ಮಿ ನರಸಿಂಹಸ್ವಾಮಿ ದೇವಾಲಯವು ಪೂರ್ವಾಭಿಮುಖವಾಗಿ ನಿರ್ಮಾಣಗೊಂಡಿದ್ದು, ಶುದ್ಧ ದ್ರಾವಿಡ ಶೈಲಿಯನ್ನು ಹೊಂದಿದೆ. ಗರ್ಭಗುಡಿಯಲ್ಲಿ ಶ್ರೀ ಭೋಗಾ ನರಸಿಂಹಸ್ವಾಮಿಯ ಶಿಲ್ಪವನ್ನು ಪ್ರತಿಷ್ಠಾಪಿಸಲಾಗಿದೆ. ಗರ್ಭಗುಡಿ, ಶುಕನಾಸ, ನವರಂಗದ ದ್ವಾರಗಳಿಗೆ ಬೆಳ್ಳಿ ತಗಡಿನಿಂದ ಅಲಂಕರಿಸಲಾಗಿದೆ. ನವರಂಗದಲ್ಲಿ ನಾಲ್ಕು ಕಂಬಗಳಿವೆ. ನಾಲ್ಕು ಕಂಬಗಳ ಮಧ್ಯದಲ್ಲಿ ಮೇಲ್ಭಾಗದಲ್ಲಿ ಸುಂದರವಾಗಿ ಭುವನೇಶ್ವರಿಯನ್ನು ಕಡೆಯಲಾಗಿದೆ. ಮುಖಮಂಟಪದಲ್ಲಿ ನಾಲ್ಕು ಕಂಬಗಳಿವೆ ಹಾಗೂ ಸುತ್ತಲೂ ಗೋಡೆ ಕಂಬಗಳಿವೆ. ಮುಖಮಂಟಪದಲ್ಲಿ ಪ್ರವೇಶದ್ವಾರವಿದ್ದು ಪ್ರವೇಶದ್ವಾರಕ್ಕೆ ಕಂಬಗಳನ್ನು ಸೇರಿಸಲಾಗಿದೆ. ಮುಖ್ಯ ಪ್ರವೇಶದ್ವಾರವು ಆಕರ್ಷಕವಾಗಿದೆ. ದ್ವಾರದ ಇಕ್ಕೆಲಗಳಲ್ಲಿ ಮೆಟ್ಟಿಲಿಗೆ ಆನೆಯ ಮುಖದ ಚಪ್ಪಡಿಗಳನ್ನು ಸೇರಿಸಲಾಗಿದೆ. ಸುಕನಾಸದಲ್ಲಿ ಹಲವಾರು ಕಂಚು ಶಿಲ್ಪಗಳಿವೆ. ಮುಖಮಂಟಪದಲ್ಲಿ ಗಣಪತಿ ಶಿಲ್ಪಗಳಿವೆ. ಮುಂಭಾಗದಲ್ಲಿ ನಾಲ್ಕು ಕಂಬಗಳಿವೆ ಗರ್ಭಗುಡಿಯ ಮೇಲೆ ದ್ರಾವಿಡ ಶೈಲಿಯ ವಿಮಾನವನ್ನು ನಿರ್ಮಿಸಲಾಗಿದೆ. ಸುತ್ತಲೂ ಪ್ರಾಕಾರವಿದ್ದು ಪ್ರಕಾರಕ್ಕೆ ಕಂಬದ ಸಾಲುಗಳನ್ನು ಸೇರಿಸಲಾಗಿದೆ.

ದೇವರಾಯನದುರ್ಗದ ನಾಮದ ಚಿಲುಮೆಯ ವೈಶಿಷ್ಟ÷ ್ಯವೂ ಸಹ ತನ್ನದೇ ಆದ ಚಾರಿತ್ರಿಕ ಇತಿಹಾಸವನ್ನು ಪಡೆದುಕೊಂಡಿದೆ. ಶ್ರೀ ರಾಮನು ಲಕ್ಷ÷ ್ಮಣ ಮತ್ತು ಸೀತೆಯರೊಂದಿಗೆ ವನವಾಸಕ್ಕೆ ಬಂದಿದ್ದಾಗ ಇಲ್ಲಿ ತಂಗಿದ್ದನೆAದು ಹೆಳಿಕೆಗಳಿವೆ. ಹಣೆಗೆ ನಾಮವನ್ನಿಡಲು ನೀರಿಗಾಗಿ ಹುಡುಕಿದಾಗ ಈ ಪ್ರದೇಶದಲ್ಲಿ ಎಲ್ಲಿಯೂ ನೀರು ಸಿಗಲಿಲ್ಲವಂತೆ. ಆಗ ತನ್ನ ಬಿಲ್ಲಿನಿಂದ ಅಲ್ಲಿದ್ದ ಬಂಡೆಗೆ ನೇರವಾಗಿ ಬಾಣ ಬಿಟ್ಟಾಗ ಬಂಡೆಯಲ್ಲಿ ನೀರು ಕಾಣಿಸಿಕೊಂಡಿತು. ಅದನ್ನು ಉಪಯೋಗಿಸಿ ನಾಮವನ್ನು ಧರಿಸಿದ್ದರಿಂದ ಅದನ್ನು ನಾಮದ ಚಿಲುಮೆ ಎಂದು ಕರೆಯುತ್ತಾರೆ.

ಈ ಭಾಗದ ಇನ್ನೊಂದು ವಿಶೇಷತೆ ಏನೆಂದರೆ ಯೋಗಲಕ್ಷ್ಮಿ÷ಿಮÃ ದೇವಾಲಯದಲ್ಲಿ ನವರಂಗದಲ್ಲಿ ಅಂದರೆ ಎಡಭಾಗಕ್ಕೆ ಹಲವಾರು ವೈಷ್ಣವರ ಶಿಲ್ಪಗಳಿವೆ. ವೇದಾಂತದೇಶಿಕರ್, ರಾಮಾನುಜಾಚಾರ್ಯ, ತಿರುಮಂಗೈ ಆಳ್ವಾರ್, ಪೊದತ್ತಾಳ್ವಾರ್, ಪೊಯ್ಸಳ್ವಾ÷ಿವರ್, ಪೊದತ್ತಾಳ್ವಾರ್, ನಮ್ಮಾಳ್ವರ್, ಅರಮಯಿಶ್ಯ ಆಳ್ವಾರ್, ಪೊದತ್ತಾಳ್ವರ್, ಪೊಯ್ಸಳ್ವಾರ್ ಇತ್ಯಾದಿ ೧೨ ಆಳ್ವಾರರ ಮೂರ್ತಿ ಶಿಲ್ಪಗಳನ್ನಿಡಲಾಗಿದೆ. ಆದಕಾರಣ ಇದೊಂದು ಪ್ರಮುಖ ಶ್ರೀ ವೈಷ್ಣವ ನೆಲೆಯಾಗಿದೆ ಎನ್ನಬಹುದು.

**ಉಪಸಂಹಾರ**

ತುಮಕೂರು ಜಿಲ್ಲೆಯ ಸಾಂಸ್ಕೃತಿಕ ಮತ್ತು ಪರಂಪರೆಯ ಕೇಂದ್ರಗಳು ಶ್ರೀಮಂತ ಮತ್ತು ಬಹು-ಶ್ರೇಣಿಯ ಐತಿಹಾಸಿಕ ನಿರೂಪಣೆಯನ್ನು ಪ್ರತಿನಿಧಿಸುತ್ತವೆ. ಇತಿಹಾಸಪೂರ್ವ ಕಲಾಕೃತಿಗಳಿಂದ ಹಿಡಿದು ಗಂಗಾ, ಹೊಯ್ಸಳ ವಿಜಯನಗರ ಸಾಮ್ರಾಜ್ಯಗಳ ಸ್ಮಾರಕಗಳು ಮತ್ತು ನಂತರದ ಇಸ್ಲಾಮಿಕ್ ಮತ್ತು ಮೈಸೂರು ಆಡಳಿತಗಾರರ ಪ್ರಭಾವದವರೆಗೆ, ಜಿಲ್ಲೆಯ ಪರಂಪರೆಯು ವಿವಿಧ ಸಂಪ್ರದಾಯಗಳ ಒಂದು ವಸ್ತ್ರವಾಗಿದೆ. ಜಿಲ್ಲೆಯ ಹಲವು ಧಾರ್ಮಿಕ ಕೇಂದ್ರಗಳು, ದೇವಾಲಯಗಳು ಮತ್ತು ಕೋಟೆಗಳು ಸಾಂಸ್ಕೃತಿಕ ಸಂರಕ್ಷಣೆಯ ಕೇಂದ್ರಗಳಾಗಿ ದೀರ್ಘಕಾಲದಿಂದ ಕಾರ್ಯನಿರ್ವಹಿಸುತ್ತಿವೆ, ಹಾಗಾಗಿ ಅವುಗಳ ಐತಿಹಾಸಿಕ ಅಧ್ಯಯನವು ಪಾರಂಪರಿಕ ತಾಣಗಳು ಮತ್ತು ಅವುಗಳ ವಿಕಾಸದ ಬಗ್ಗೆ ತಿಳುವಳಿಕೆಯನ್ನು ಮೂಡಿಸುವುದರ ಜೊತೆಗೆ ಸಾಂಸ್ಕೃತಿಕ ಪರಂಪರೆಯ ಮಹತ್ವವನ್ನು ತಿಳಿಸುತ್ತದೆ.

**ಗ್ರಂಥಸೂಚಿ**


*ರಂಗನಾಥ - ಭಾರತದ ಪ್ರಾದೇಶಿಕ ಮತ್ತು ಆರ್ಥಿಕ ಭೂಗೋಳಶಾಸ್ತ್ರ, ವಿದ್ಯಾನಿಧಿ ಪ್ರಕಾಶನ, ಗದಗ, ೨೦೧೪,*

*ಡಾ.ಆರ್.ಗೋಪಾಲ್ (ಸಂ) – ತುಮಕೂರು ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು, ೨೦೦೮.*

*ಎಪಿಗ್ರಾಫೀಯಾ ಕರ್ನಾಟಕ ಸಂಪುಟಗಳು-೨೪, ೨೫, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮಾನಸಗಂಗೋತ್ರಿ, ಮೈಸೂರು.*

*ಎನ್.ಚಂದ್ರಶೇಖರ್ (ಸಂ) – ತುಮಕೂರು ಜಿಲ್ಲಾ ಗ್ಯಾಸೆಟಿಯರ್ (ಪರಿಷ್ಕøÈತ ಕನ್ನಡ ಆವೃತ್ತಿ) ಕರ್ನಾಟಕ ಸರ್ಕಾರ, ಬೆಂಗಳೂರು, ೨೦೧೭.*

*ಸುರೇಶ್ ಭೀ. ಹೂಗಾರ – ಕರ್ನಾಟಕದ ಪ್ರಮುಖ ಐತಿಹಾಸಿಕ ಸ್ಥಳಗಳು, ವಾಸನ್ ಪಬ್ಲಿಕೇಷನ್ಸ್, ಬೆಂಗಳೂರು, ೨೦೦೮.*

*ಎಂ.ಎಸ್.ರಾಜಯ್ಯ - ಸುವಿಮಲ್ಲನ ತೋಮ್ಬದ ಸಿದ್ದೇಶ್ವರ ಸಾಂಗತ್ಯ (ಸಂ), ಶಿವಧರ್ಮ ಗ್ರಂಥಮಾಲ, ತಿಪಟೂರು, ೧೯೯೫.*

*ಎಸ್.ಶಿವಣ್ಣ (ಸಂ) – ಯತಿ ಬಸವಲಿಂಗ ವಿರಚಿತ ತೋಂಟದ ಸಿದ್ದೇಶ್ವರ ಸಾಂಗತ್ಯ, ವೀರಶೈವ ಅಧ್ಯಯನ ಸಂಸ್ಥೆ, ಅದಗ, ೧೯೯೭.*

*ಎನ್.ಬಸವಾರಾಧ್ಯ - ಹೇರಂಬನ ಸಿದ್ದಲಿಂಗೇಶ್ವರ ಸಾಂಗತ್ಯ (ಸಂ) – ತೋಂಟದ ಸಿದ್ದೇಶ್ವರ ಕೈಂಕರ್ಯ ಸೇವಾ ಸಂಘ, ಎಡೆಯೂರು, ೧೯೮೧.*

*ಹೆಚ್.ದೇವೀರಪ್ಪ ಮತ್ತು ಚೆನ್ನಪ್ಪ ಎರೆಸೀಮೆ – ವೀರಶೈವ ಅಧ್ಯಯನ ಸಂಸ್ಥೆ, ಗದಗ.*

*ಫ.ಗು.ಹಳಕಟ್ಟಿ (ಸಂ) - ನಿರಂಜನ ವಂಶ ರತ್ನಾಕರ, ಸಿದ್ದಗಂಗ ಪ್ರಕಾಶನ, ೨೦೦೦.*

*ಬಿ.ಭೀಮರಾಜು - ಶ್ರೀ ಸಿದ್ದಗಂಗಾ ಮಹಿಮಾದರ್ಶ, ಬೆಂಗಳೂರು, ೧೯೫೯.*


*Copyright © 2025, Scholarly Research Journal for Interdisciplinary Studies*

ನಂ.ಶಿವಪ್ಪಶಾಸ್ತ್ರಿ (ಸಂ) – ಮತಕೂರು ನಂಜುAಡ ಶಿಅಯೋಗಿಗಳ ಆಟವೀಶ್ವರ ಚರಿತ, ಬೆಂಗಳೂರು, ೧೮೯೪.
ಎನ್. ಶಿವಣ್ಣ (ಸಂ) - ಸಿದ್ದಲಿಂಗೇಶ್ವರ ಸಾಂಗತ್ಯ ಕೃತಿಗಳು, ಶ್ರೀ ತೋಂಟದ ಸಿದ್ದಲಿಂಗೇಶ್ವರ ಸಮಗ್ರ ಸಾಹಿತ್ಯ ಸಂಪುಟ.
ಡಾ.ಡಿ.ಎನ್.ಯೋಗೀಶ್ವರಪ್ಪ – ಕಲ್ಪಶೋಧ (ತುಮಕೂರು ಜಿಲ್ಲೆಯ ಸಂಶೋಧನಾ ಲೇಖನಗಳು) ಪ್ರಗತಿ ಗ್ರಾಫಿಕ್ಸ್, ಬೆಂಗಳೂರು, ೨೦೧೨.
ಎ.ಕ.ಸಂಪುಟ-೧೬, ಕುಣಿಗಲ್ ತಾಲ್ಲೂಕು ಶಾಸನ ಸಂಖ್ಯೆ-೪೯.
ಡಾ.ಬಿ.ನಂಜುAಡಸ್ವಾಮಿ (ಸಂ) – ದಕ್ಷಿಣ ಕಾಶಿ ಎನಿಸಿದ ಶಿವಗಂಗೆ ಕ್ಷೇತ್ರ ಮಹಾತ್ಮೆ÷ಯ (ಸ್ಥಳ ಪುರಾಣ, ಐತಿಹ್ಯ, ಕ್ಷೇತ್ರ ಪರಿಚಯ) ಪ್ರಕಾಶಕರು ಸ್ವರ್ಣ, ಕಿರಣ ಪ್ರಕಾಶನ, ಮೈಸೂರು ೨.
ಟಿ.ಎಸ್.ಪದ್ಮನಾಭ ಶರ್ಮ(ಸಂ),ಶ್ರೀ ಗೋರವನಹಳ್ಳಿ ಲಕ್ಷ್ಮೀ ಕ್ಷೇತ್ರ ಮಹಾತ್ಮೆ, ಶ್ರೀ ಗಣೇಶ ಪ್ರಕಾಶನ ಬೆಂಗಳೂರು.
ಸಿದ್ದಗಿರಿ ನಂಜುAಡಸ್ವಾಮಿ, ಗಪ್ತ ಆಫ್‌ಸೆಟ್ ಪ್ರಿಂಟರ್ಸ್, ಮೈಸೂರು, ೨೦೨೩.
ಡಾ.ಎಸ್.ಕೆ.ಜೋಗಿ – ತುಮಕೂರು ಜಿಲ್ಲೆಯ ಕೋಟೆ ಕೊತ್ತಲಗಳು – ತುಮಕೂರು ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ ಪ್ರಾಚ್ಯವಸ್ತು ಮತ್ತು ಸಂಗ್ರಹಲಾಯಗಳ ನಿರ್ದೇಶನಾಲಯ, ಮೈಸೂರು, ೨೦೦೯.
ದಿ.ಕನಕಗಿರಿ ನರಸಿಂಹಮೂರ್ತಿ - ಶ್ರೀ ಕನಕಗಿರಿ ಮಹಾತ್ಮೆ, ಶ್ರೀಅರಿಗಿರಿ ನರಸಿಂಹಮೂರ್ತಿ, ಶ್ರೀ ಕರಿಗಿರಿ ನಂ.೪, ಮನುವನ ವಿಜಯನಗರ, ಬೆಂಗಳೂರು, ೨೦೦೬
ಸಿಂದಗಿ ರಾಜಶೇಖರ್ – ಕರ್ನಾಟಕ ವಾಸ್ತುಶಿಲ್ಪ ಮತ್ತು ಚಿತ್ರಕಲೆ, ಸುಜಾತ ಪಬ್ಲಿಕೆಷನ್ಸ್, ಧಾರವಾಡ, ೨೨ ಎ.ಕ.ಸಂಪುಟ-೨೪, ತುಮಕೂರು ತಾಲ್ಲೂಕು ಶಾಸನ ಸಂಖ್ಯೆ-೧೦ ರಿಂದ ೧೪.

Copyright © 2025, Scholarly Research Journal for Interdisciplinary Studies